ದೆಸಿಡಿಮಿಡಿಗೊಂಡಂ || ೧೦೮ || ಮತ್ತಮೊಂದು ಲತಾನಿಕುಂಜದೊಳ್ ;
ಕಂ|| ಅಸುವಳದಿಂಬುಸಿಲೆಸಗು | ತ್ತೊಸೆದಮದರ್ಪ್ಪದ್ವಿಭಿಲ್ಲಯುಂಭಲ್ಲನುಮಾ ||
ಗೆಲೆದಿಲಸಿತಲತೆತಾಂ | ಪೊಸಮುಳ್ಕರದೊಂದಿಸುತ್ತಿಬೆಳೆದತ್ತಂದೊಲ್ ||೧೦೯||
ವೃ|| ಸವತಿಯೊಳಾಂತುಬಲ್ಸುಸಿಲನಾಗಳೆತನ್ನಖದಂತದೇಗ್ರರ್ಳಂ | ಜವದೊಳೆವಂ
ಬೆಪ್ರಜ್ಜುಗದೆಪೆರ್ಬುಲಿಯಂಪಿಡಿದಂಕಿಕಂಕಳೊಳ್ || ಸವಿನಯಮಾಗಳೆಯ್ದಿನಿಲಿ
ತಾಂಶಬರಂಸತಿನೋಡಿವಕ್ತ್ರಮಂ | ನವವಿಧಭಂಗಿಯಂನಡುಕೆಮಂತಿಳಿದಾಗಳೆಪೊ
ಯ್ದಳುಂಬಿನಿಂ || ೧೧೦ || ಮತ್ತಮಲ್ಲಿ ; ಕಂ|| ಶರದಿಂದಿಸೆಹರಿಣ
ಮುನದು | ತಿರೆಯೊಸೈಗೆಡೆಯೆನೋಳ್ಪಶಬರಿಯನೋಟಂ || ಕೆರಮೆಸೆದುದುಪರಿವೇ
ಷಂ | ಮೆರೆದಿರೆಮೃಗಮಾಮೃಗಾಂಕಮೃಗಶಾಬಂಬೊಲ್ || ೧೧೧ ||
ವೃ|| ಪಿರಿದೆಮ್ಮೀನೇತ್ರದಂದಂದೆಗಳ್ವುವುಮೃಗಮಿಾಕೃಷ್ಣಸಾರಂಗಳಂನಾ | ಮ್ಮರ
ದಿಂದಂಕೊಲ್ವೆವೆಂದಾರ್ದಿಸಲೊಡರಿಸೆಭಿಲ್ಲೀಚಯಂಬಳ್ಕಿಕುಗ್ರರ್ || ತ್ತುರೆನಾವಲ್ಲಲ್ಲ
ಮಿಾವಾಕ್ಯಮೆಕಲವಚನಂಕಾಯ್ದುದೆನ್ನಲ್ಮೃಗಂಗಳ್ | ಪಿರಿದುಂಕೋಪಂಮಿಗ

ಲಾಂಗಳೆಕವಿಯನಿಸಲ್ಪಿಟ್ಟತಾಂಪೋಯ್ತುಬೇಗಂ ॥ ೧೧೨ ॥ ಅಲ್ಲಿಂಪೆಱತೊಂ
ದು ವಿಪಿನ ಪಥಪ್ರದೇಶದಲ್ಲಿ ; ಕಂ॥ ಗುರುಕುಚಭರಮೆಂಭಿಲ್ಲಿಯ । ಕರಿ
ಶಿರವರಕುಂಭಮೆಂದುಬಗೆದದಕೆಱಗಲ್ ॥ ಹರಿಬನದೊಳ್ಕರದೆಚ್ಚಂ । ಪರಿಪಡೆಸಿಂ
ಹಂಕಿರಾತನೊರ್ವಂಭರದಿಂ ॥ ೧೧೩ ॥ ಕಂ॥ ನಸೆವುಸಗಲ್ಪಸಲೆಯೊಳ
ಸ । ವಸದಿಂಬಸಿಲೆಸವಹರಿಣನಂಶಬರಂತಾ ॥ ನಿಸಲೆಯ್ದಿಕಾವುನಂಬಿಂ । ದಿಸೆನ
ಸೆಯಿಂಪೋದನರಸಿಯುಂಪುಡುಕುತ್ತುಂ ॥ ೧೧೪ ॥ ಕಂ॥ ಕರಿಗಿರಿಶಿರದೊಳ್ಕ
ರೆಯಲ್ । ಶರವರ್ಷಮನರರೆಜಿಷ್ಣುಚಾಪಂಬಿಡಿದು ॥ ದ್ಬಾರಶಬರಜಲದಮಾಗಳ್ ।
ಪರಿದುದುಗಿರಿಧಾತುವೊಲ್ಪುರಕ್ತಾಸಾರಂ ॥ ೧೧೫ ॥ ವೃ॥ ಕಡಿದುಮೃಗೇಂ
ದ್ರನಂಬಡಿದುಪೆರ್ಮೊಲನಂಕೆಡೆಯೆಚ್ಚುಪಂದಿಯಂ । ಪೊಡೆದುಲುಲಾಯಮಂತಿವಿ
ದುಬಳ್ಳಿರೆಯಂಶರದೆಚ್ಚುಪುಲ್ಲೆಯಂ ॥ ಪಿಡಿದುಖಗೌಘಮಂತರಿದುದಂತಿಗಳಂತವೆ
ಯಿಕ್ಕಿತೋಳನಂ । ಸಡಗರದಿಂಪುಳಿಂದತತಿಬೇಂಟೆಯನಾಡಿದುದಬ್ಬರಂಮಿಗಲ್ ॥
॥೧೧೬॥ ಇಂತಾ ಕಾಂತಾರದೊಳ್ಬಿಯದರಪಡೆ ಬೇಂಟೆಯಾಡಿದನಂತರಂ ;
ವೃ॥ ಬಸಿನೆತ್ತಗ್ಗಜಮೌಕ್ತಿಕಂಚಮರಿಮಾಂಸಂಕೋಡುಲಾಕ್ಷಾರಸಂ । ಪೊಸನಾ
ರ್ಪೊಂಬುಲಿಸಮ್ಮದಾಡೆಮೃಗಶ ಬಂಪೂತಿವೆಕ್ಕಿಂಬುವೆ ॥ ತ್ತೆಱೆದಿಪರ್ಣಪೊಸಪೀಲಿ
ದಂಡೆಯುಡುಪಣ್ತುಂಬಿರ್ದಬಲಸ್ಗಡೆಯುಂ । ಜಸಮುಂಪೊತ್ತವೊಲಾಂತದೇಂತಳ
ರ್ದದೋವ್ಯಾಧೌಘಮಾಸತ್ರದೊಳ್ ॥ ೧೧೭ ॥ ಆಗಳೊಂದು ಕುರಂಗಂ
ಬೆದರ್ದು ಬಳಿಯಪೊದರ ಪೊರೆಯಿಂ ಪೊರಮಟ್ಟು ; ವೃ॥ ಸಿಡಿದೋಡಿ
ತ್ತುಕರಂಮೃಗಂಬಹಳವೇಗಂಬಾಯ್ಗಳಿಂದೂರ್ವಿತಾಂ । ಸಿಡಿಯಲ್ಕಿರ್ಬರಿಯುರ್ಬಿ
ಲಂಘಿಸುತಕಾಲ್ಗಳ್ಭೂಮಿಯೊಳ್ನಿಲ್ವುದೆಂ ॥ ಜಿಡಗಾಣಲ್ಕಡದಂತೆಕೆಱೆಡಲುಗೆಕೆ
ಣ್ಕಾಲತ್ತಿರೆಸುಯ್ಗಾಳದಿಂ । ಪೊಡೆಯಲ್ಗಂಗನೆಪಾರ್ದುಕೊಂಕಿಪಲವುಂಪಿಂದಿಟ್ಟಿ
ಯಿಂದಭ್ರದೊಳ್ ॥ ೧೧೮ ॥ ಅಂತದಂಪೆಱಗೆ ವಿಲಾಸದಿಂ ಬರುತ್ತಿರ್ದ
ಕುಳಿಂದ ಭೂಪಾಲಂಕಂಡು ಪೊಡೆಯಲೆಂದು ಪತ್ತಿರ್ದ ಕುದಿರೆಯುಂ ಚಬುಕುಗೆ
ಯ್ಯೆ, ವೃ॥ ಇದೆಕೊಳ್ಸಿಕ್ಕಿತುಸಿಕ್ಕಿತೆಂಬಬಗೆಸಲ್ಲಲೆಪ್ಪೋಯ್ತುಪೋಯ್ತೆಂಬ
ದುಂ । ಮದಮುರ್ಬಲ್ಪಿಡಿದಂಕಡಂಗಿಮೃಗಮಂತಾನೆಂಬಚೆತ್ತಂನಿಲಲ್ ॥ ಮುದದಿಂ
ದೆಳ್ತರಿಪಿಂದೆಸಂಗಡದವರ್ವಿಕ್ರಾಂತಕಂರೀರವಂ । ಪದೆಪಿಂಬಿಟ್ಟನತೀವವೇಗದೆನ್ನೃ
ಪಾಲಂರಾಜಿಸಾವಾಜಿಯುಂ ॥ ೧೧೯ ॥ ವೃ॥ ಖರಟಂಕೋತ್ಕರಮುನ್ನ
ತೋಜ್ಜಘನಮುನ್ನಿದ್ರಾನನಂದೀರ್ಘಬಂ । ಧುರವಾಲಂಸಮದಂತನೀಲಮಣಿನೇ
ತ್ರಂಶ್ವೇತವರ್ಣಂಲಸ ॥ ದ್ವರಸುಗ್ರೀವಮುದಗ್ರನಾಸಪುಟಮುದ್ಗಂಭೀರಸಾದಂ
ಮುಹೋ । ದ್ಘರಥಾಲಂಬಿಗಿಕಂದಮೆಂಬಿಪಮುದುತ್ತುಂಗಾಶ್ವಮಾಗಳ್ಜವಂ ॥
॥ ೧೨೦ ॥ ವೃ॥ ಪಿರಿದುರೆಪುಲ್ಲೆಯಂಪವನನಂಶರಮಂಕ್ಷಣಕಾಂತಿಯುಂ
ಲಸ । ತ್ಸರಮಕಟಾಕ್ಷಮಂಕ್ರಮದಿವೇಗದೆಸೋಲಿಸಿತುಂಗವಾಜಿಬಂ ॥ ಧುರವನಮ

ಧ್ಯದೊಳ್ಗಡುಸರಂದರಿಪಳ್ಳಮಿದೆಂಬಭೇದಮಂ । ಪರಿಕಿಸದೆಂಕರಂತಳದ ಕಡೋಕಿ
ಳಿರ್ದಭ್ರಪಥಪ್ರದೇಶದೊಳ್ ॥ ೧೨೧ ॥ ವೃ॥ ಭರದಿಂದಭ್ರಕೆಪಾಯ್ದುತಾಂ
ಗಮಿಸಿಪಾಹಂಸೂರ್ಯಚಂದ್ರಾನ್ವಿತಂ । ಸುಖವರ್ತ್ಮಂನಿಜಮೌಳಿಯೊಳ್ಪಡೆವುದೆಂ
ಬಂತುಂಸಮುದ್ರಾವೃತಂ ॥ ಧರಣೀಭಾಗಮೆಬಿಳ್ದುಪೋದಪುದಿದೆಂಬಂತುಂಮಹಾ
ವೇಗಮಿಂ । ತಿರವಂಕಾಣಿಸಿದತ್ತುಭೂಮಿಪನಚಿತ್ತಕ್ಕಾಗಳಾಕಾಡಿನೊಳ್ ॥೧೨೨॥
ಅಂತು ತುಂಗತುರಂಗಮಂ ಪರಿಯೆಮುಂದೆ, ವೃ॥ ದಿನಪನವಾಜಿಗಳ್ಬೆದ
ರೆವೇಗಮೊಳಯ್ದುವತನ್ನವಾಜಿಯುಂ । ಜನಪತಿನೋಡಿತತ್ಸ್ವತನನಾಗಳೆನಿಲ್ಲಿಸಿತಾಂ
ವಿಚಾರಿಪಂ ॥ ಮನಮದುತನ್ನೊಳಾಗೆಚರಿತಾಯನಮಂತವೆಟ್ಟಬೇಕೆಬಂ । ದಿನ
ಪಧಿಶೌರ್ಯನಂತೆನಿಜವಾಜಿಯವೇಗಮನಾಗತೀರ್ಚದಂ ॥ ॥ ೧೨೩ ॥
ಬಳಿಯುಮರಸಂ ಕುದುರೆಯಿಂನಿಳಿದು ಮೇಧಾವಿಜನಂ ಮುಟ್ಟವಂದು ಸಂತೈಸಿ ಬೆಚ್ಚ
ರದೊಳೆ ಬಳಿಸಂದುವಂದ ತನ್ನವರ್ಗಮಂ ನೋಡಿ, ವೃ॥ ಅಳಲಿಂದೀಸುತ
ನೋವೊಬಾಡಿಭಯದಿಂಬೆಂಡಾದಪಂಬಂದನೆಂ । ತಳವಿಂದೀಘನಗಹ್ವರಕ್ಕೆ ತೃಷೆ
ಯಿಂದನ್ನಾಶೆಯಿಂಸುಯ್ದಪಂ ॥ ಬಲಪದ್ವ್ಯಾಧವಿತಾನಮಿಲ್ಲಿಸುತನಂಬಿಟ್ಟುದುರ್
ದೋಬಾಲನಂ । ಪುಲಿಪಾಯ್ದುಲ್ಲಿಗೆಕರ್ಚಿತಂದುಳಿದಪೋಂಪೋದತ್ತೊಮದ್ಭೀತಿ
ಯಿಂ ॥ ೧೨೪ ॥ ವೃ॥ ತರಳಂಪಕ್ಕಣದಿಂದಮೇಂಬಿನದದಿಂದೇಱೆಂದನೋ
ಚಂಚಲಂ । ಭರದಿಂಸುಯ್ಪುದಳ್ಳುಣ್ಮೆಚಾಯ್ಬರೆತುಮೊಯ್ಗೋಹೌಕಬಲ್ಸೇಡೆಯಿಂ॥
ಪಿರಿದುಂಬತ್ತೆಬಸಿರ್ಪರಿಶ್ರಮದೆಜೀವಂನಿಲ್ಲಲಾರ್ತಪ್ಪುದಿ । ಱಿರವಿಂತೀಗಳಿದೇತುಮಾ
ದೊಡಮಿದಂಕಾಪಾಡಮೇಳ್ಕಂದೃಢಂ ॥ ೧೨೫ ॥ ಎಂದು ಕೆಳೆಂದ ಭೂ
ಪಾಲಂ ನುಡಿಯ ಲೊಡನಮಾತ್ಯಂ ಪುಷ್ಪದಂತಂ ಕುಮಾರನಂ ನೋಡಿ ;
ವೃ॥ ಅವಧರಿಸಾಣ್ಮಬಿನ್ನಪಮನೀಸುತನಂಗದಚಕ್ರವರ್ತಿಸ । ದ್ವಿವಿಧಸುಲಕ್ಷಣೆಯೂ
ರ್ಣನಯನಾಬ್ಜಸುನಾಸಿಕಮಬ್ಜಶಂಖಚ ॥ ಕ್ರವಿದಿತರೇಖೆಯುಕ್ತಕರಮುದ್ಘಗ
ಜಾಶ್ವದಚಿಹ್ನೆಯಿಂದೆಪೆ । ಶ್ರುವಪದಮಾಸುತಂಜನಪಬಾಲಕನೆಂಬುದನಿಸ್ಮಿಮಾ
ಡುಗುಂ ॥ ೧೨೬ ॥ ವೃ॥ ರಾಜಾಜಬ್ಬಿಹ್ನೆಯಿಂದಂನಿಜದೆಕುವರನುದ್ಯನ್ಮ
ಹಾರಾಜಪುತ್ರಂ । ಘೋರಾರಣ್ಯಾಂತರಂಬೊಕ್ಕುದುಪಿರಿದುವಲಂಪುತ್ರನಾಶ್ಚರ್ಯ
ಮಕ್ಕುಂ ॥ ವೀರೋದಾರಾದಿಧೈರ್ಯಂಗಳನರಿದಹಿತರ್ಸೋನುವಂಕೊಲ್ವುದೆಂದಾ ।
ಕ್ರೂರಾಂಕಕರ್ಣನವಕ್ರೀಗಳೆಪಿತರರಿದಂಕಾಣದಂತೀಳ್ವರಕ್ಕುಂ ॥ ೧೨೭ ॥
ಈಗಳ್ ದೇವರೀಸುತನ ನೊಲವಿಂ ರಕ್ಷಿಪುದೆಪದನ ದೆಂತೆನೆ ; ಕಂ॥ ದಶವಿಧ
ಸುತರೊಳರಿಳೆಯೊಳ್ । ವಿಶದಂಸುತರಲ್ಲಿಶುದ್ಧನೌರಸಪುತ್ರಂ ॥ ವಿಷಮಿಸಿದೊಡಿ
ತರಕುವರರ್ । ವಿಶುದ್ಧರಕ್ಕುಂನಯಾಬ್ಧಿರಾಕಾಚಂದ್ರಾ ॥ ೧೨೮ ॥
ಎಂದೊರೆದ ಪುಷ್ಪದಂತನ ಮಾತಂಮನ್ನಿಸಿ ತದ್ರಾಜಶೇಖರಂ ; ವೃ॥ ಬರೆತೆ
ಗೆದಪ್ಪಿಮುದ್ದಿಸಿಕುಮಾರನನಂಗಮನೀಕ್ಷಿಸಿಕೈಗಳಿಂ । ಸುರುಚಿರರಾಜಲಕ್ಷಣಮನೀಕ್ಷಿ

ಸಿಮೋಹಮನಂತರಂಗದೊಳ್ ॥ ನಿರಿಸಿಮುಖಾಬ್ಜದೊಳ್ಮಲೆವನುಣ್ಣರುಳಂಸಿರಿ ಯಾಗೆಶಿರ್ದಿಸಾ । ದರಮುಚತೋಕ್ತಿಯ ೦ನುಮಿದುನಂಬಿಸಿದಂವರರಾಜಶೇಖರಂ ॥ ॥ ೧೨೯ ॥ ವೃ॥ ಪಿರಿದಿಂತೀನಯದಿಂಕುಮಾರಕನನಾಗಳ್ನಂಬಿಸುತ್ತೆತ್ತಿಭೂ । ವರನಾಹಾರಮನಿತ್ತುನೀಗ್ರ್ರಡಿಸಿತಕ್ರಾಜೇಂದ್ರಪುತ್ರಂಗೆಕೂ ॥ ರ್ತುರಿಭಾಸ್ವದ್ರುಗವಲ್ಲಿಕುಳ್ಳಿರಿಸಿಳ್ತೈನ್ಯಂಸಂತಸಂಬೊಂದೆಸ । ತ್ವರದಿಂಪತ್ತನಕೆಯ್ದುವಂತೆಬೆಸನಂಗೆಯ್ದಂಧರಾವಲ್ಲಭಂ ॥ ೧೩೦ ॥ ವೃ॥ ಸಂದಾನಂದಮನೋಬಾಹ್ಯಾಂತರದೆಮೆರೆಯೆಸತ್ಸಾತ್ರಿಯೋದ್ಧರ್ಮವಲ್ಲೀ । ಕಂದಂಶ್ರೀಕಾಂತಪಾದಾಂಬುಜಮಧುಕರನುದ್ಯನ್ಮಹಾರಾಜಪುತ್ರಂ ॥ ಒಂದಲ್ತನ್ನೀವದೀಯಾಭ್ಯುದಯಮಿದುಸುಸಂಸತ್ಯಮೆಂದಾನ್ಯಕಾಲಂ । ತಂದಂತತ್ರೋಸುವಂಪತ್ತನಕೆಸಕಲರಾಜಾಗಮಾಂಭೋಧಿಚಂದ್ರಂ ॥ ೧೩೧ ॥ ಉತ್ಸಾಹವೃತ್ತ॥ ಮಂದದೈತ್ಯಕಂಠರಕ್ತಸಿಕ್ತಖಡ್ಗವಲ್ಲರೀ । ಬಂಧುರಂಬ್ಜಪಾಣಿಶಾರದಾಶಿವಾದಿದೇವತಾ ॥ ವಂದಿತಾಂಘ್ರಿಪದ್ಮವಾಸಿಲೋಕಮಾತೆಮಂಗಳೇ । ಚಂದಮೊಂದೆರಕ್ಷಿಸೆನ್ನವಿಷ್ಣುಪತ್ನಿವೈಷ್ಣವೀ ॥೧೩೨॥

ಗದ್ಯ॥ ಇದುಸಮಸ್ತಸುರಾಸುರಕೋಟೀಮಣಿಸಾರಮಸ್ತಕನ್ಯಸ್ತಹಸ್ತಪುಟಗಾಭಸ್ತಿಪ್ರಸರಪ್ರಕಾಶಪಲ್ಲಕಲಿತತರಸ್ಫುರಿತಸಾಂಕವಿಸ್ಫುರಿತವಿಕ್ರಮಚಕ್ರಪಾಣಿಪಾದಪದ್ಮಪರಾಗರಾಂಛಿತಶಿರಃಕಲಿತಸುವರ್ಣರಚನಾವಿಶೇಷಚಂಚಚ್ಚರೀಕಾಯಮಾನ, ಪಾರಾವಾರಣಚರಣಸರಸಿರುಹಕಿಂಜಲ್ಕಮಿಳಿತಸಾಳಿಗಾಪ್ರವರ್ತೀರ್ಣಸ್ವಾಪದಮಹಿಮಾನಿರ್ಮಿತಕವಿತಾನಿಸರ್ಗಮಾನಸಶ್ರೀವೇಂಕಟವರಾಯವಿರಚಿತಮಪ್ಪಚಂದ್ರಹಾಸಾಭ್ಯುದಯದೊಳಷ್ಟಮಾಶ್ವಾಸಂ

ಸಂಪೂರ್ಣಂ

ಅಷ್ಟಮಾಶ್ವಾಸಂ.

ಕಂ॥ ಶ್ರೀನಾರೀಸದ್ಗುಣಯುತೆ । ಮಾನಸಜಲಜಾಂತಮಧುಮದೋದ್ಧತಭೃಂಗಂ ॥ ಮಾನನಿಧಿನಮಿತಲೇವಪಿ । ತಾನಂತ್ಸೆಲೆಗೆನ್ನನಾವಗಂಶ್ರೀಶ್ರೀಶಂ ॥೧॥ ವೃ॥ ಸ್ಮೃತಿಯಾಚಾರಮನಂತೆಸೀತಿಶಯಮಂಹೋಮಂಮಹಾಸ್ವಾಹೆಯಂ । ಮತಿಸುಜ್ಞಾನಮನೇಳ್ಗೆಸಿಂಗರಮನಾಶ್ರೀಕಾಮಮಂಕೀರ್ತಿಸ ॥ ನ್ನುತಿಯಂಭಕ್ತಿನಿಕಾಮಮಂಪ್ರಣಯದಿಂದಂತರ್ಪನೋಲ್ಪೊಬ್ಬಮಿಪಂ । ತತಸಂತೋಷದೆತಂದನಾಸಕಲಭೂಶ್ರೀಮಿತ್ರನಂಪುತ್ರನಂ ॥ ೨ ॥ ಅಂತು ಬಪರ್ಗಗಳ್ಮಂದೆ,

ವೃ॥ ಕಳವೆಯಕೆಯ್ಗಳಿಂಬೆಳೆಗಳಿಂವಿಪಿನಂಗಳಿನಂಬುಜಾಕರಂ । ಗಳಿನಳಿಮಾಲೆಯಿಂಶುಕಪಿಕಂಗಳಿನೊಪ್ಪಮನಪ್ಪುಗೆಯ್ದುಪೆಂ ॥ ವಳಿದುರ್ರುಗಲ್ಕನಂಗೊಳಿಪಸಿಂಗರ

ದೋಂಟಗಳಿಂದಮೊಪ್ಪುವಾ । ವಿಳಸಿತಮಪ್ಪದೇಶಮದುಕಣ್ಗೆಸೆದಿರ್ದುದುನೋಟಕರ್ಕಳಾ ॥ ೩ ॥ ವೃ॥ ದಳಿತಾಬ್ಜಪ್ರಸರಂಗಳಿಂಕುಮುದಮಾಲಾರಾಮದಿಂಪಕ್ಷಿಸಂ । ಕುಳದಿಂನಿರ್ಮಲವಾರಿಯಿಂಸ್ಫಟಿಕಸೋಪಾನಂಗಳಿಂಹಂಸಸಂ ॥ ಮಿಳಿತೋರ್ಮಿವ್ರಜದಿಂರಥನ್ಮಧುಪಸಂಗೀತಂಗಳಂಸೆಯ್ವುದಲಿಂ । ಪೊಳೆವುತ್ತಿರ್ದ್ದಪುವಲ್ಲಿಗಲ್ಲಿಗೆಸರಂತದ್ದೇಶದಾವಾಸದೊಳ್ ॥ ೪ ॥ ವೃ॥ ಪದೆಪಿಂಭಾರತಭೂಮಿಸುಂಬಸತಿಯಾಚಂಚನ್ಮುಖಂದೇಶಮಾ । ಸುದತೀವಕ್ತ್ರದಘೋಣದತ್ತೆಕಬರೀಭಾರಂಕೆರಂಶೋಭಿಸಂ ॥ ತದುಶೀತಾಚಲನೀಲಮೇಘಮಹಿತಂಕಣ್ಗೊಪ್ಪುಗುಂದೇಶದಾ । ತಾದಿಯೊಳ್ತಾನಳಕಾಭಿರಾಮಗುಣಯುಕ್ತಾನಂತರತ್ನಾಂಕಿತಂ ॥ ೫ ॥

ಅಂತೆಸೆವ ಕುಳಿಂದದೇಶದ ರಾಜಧಾನಿಯಪ್ಪ ಚಂದನಾವತಿಯಂ ಕುಳಿಂದರಾಜಂ ಪುಗಲೊಡಮನ್ನೆಗಂ, ವೃ॥ ಭರದಿಂಮುಂದೆಯ್ದಿದೂತರ್ವ್ವಿಪಿನದೆನ್ನೃಪಪುತ್ರಂಮಹಾಭಾಗನುತ್ತ । ತ್ರಿರಮಾಕಾಂತಂಲಸದ್ರಾಜಿತನೃಪಗುಣಯುಕ್ತಂಸ್ಫುರದ್ವಕ್ಷಣಂಭಾ ॥ ಸುರದೇಹಂಸಿಲ್ಕಿದಂಮತ್ಪತಿಗೆನುತೆಪೇಳ್ದತ್ತಾಮಾತ್ರಿಣಿಗಂಸ । ತ್ವರದಿಂಪೌರಗ್ರಾಮಾನಂತಸದಬಳಿಯಿಂಪೇರ್ಚಿಸಿದ್ದರ್ಕೃತಾಂತಂ ॥ ೬ ॥

ಅನಂತರ ಮಲ್ಲಿ, ವೃ॥ ಪವಳದರನ್ನದೋರಣದತೋರಣವೆಪ್ಪಿರೆಬೀದಿಬೀದಿಯೊಳ್ । ನವವಿಧರಂಗವಲ್ಲಿಮೆರೆಯಲ್ಧ್ವಜಮೊಳ್ದಿರೆಗಂಧರ್ವಸದಿಂ ॥ ದವನಿಕರಂಸುಗಂಧಮಯವಾಗೆಪುರಂತನ ಜಪ್ರಮೋದದಿಂ । ನವವಿಧಬಂಗಿಯಂತಳೆದಾದೋಎನೆತಾಂಮೆರೆದಿರ್ದುದಂದದಿಂ ॥ ೭ ॥ ಅಂತು ಸಿಂಗರವಾದ ನಗರಿಯಂಪೊಕ್ಕು ಕುಳಿಂದರಾಜಂ ನಿಜರಮಣಿಯಂತವರದೆಡೆಗೆ ಸುತನೊಡನೆಳ್ತಂದಾಗಳ್, ವೃ॥ ಪೆರೆಯಂಕಂಡುವಿಲೋಲವಾರುದಧಿಯಂತಾಂಪೊಲ್ದುತದ್ರಾಜ್ಞೀಭಾ । ಸುರಮಂಜೀರದನುಣ್ಚರಂಕಟಕಶಬ್ದಂಕಾಂಚಿಯಾರಾವಮೊ॥ಪ್ಪಿರೆಹಸ್ತಾಂಬುಜಲಕ್ಷ್ಮಿಚಂದ್ರಮತಿಚಂಚದ್ವೇಣಿತಾನೀಳದಂ । ತಿರೆಭೂಪಂಪಿಡಿದಂತೆಕುಳ್ಳಿರಿಸಿತಾನಂದೇಮಮುಂಚಾಗ್ರದೊಳ್ ॥ ೮ ॥ ವೃ॥ ನೆಲಸಿಕುಮಾರನಂತೊಡೆಯಮೇಲಿರಿಸುತ್ತಬಲಾಬ್ಜವಕ್ತ್ರಮಂ । ನಲವಿನೊಳೆಯ್ದೆನೋಡಿಸತಿಪುತ್ರನಿವಂನೃಪಲಕ್ಷಣಾಂಕಿತಂ ॥ ಲಲನೆವನಾಂತರಾಳದೊಳೆಸಿಗ್ಕಿದನೀತನನೆಂತುಮಾದೊಡಂ । ಕಳರವೆನಮ್ಮಪುತ್ರನೆನುತುಂಸಲಪುತ್ತಿರ ಪಂಕಜಾಂಬಕೀ ॥ ೯ ॥

ವೃ॥ ಹರಿನಮ್ಮೊಳ್ಮಗೆಕೊಟ್ಟರ್ನಿನ್ನುಸಿರೊಳ್ಸತ್ಪುತ್ರನಂತಾಂಕೇಡಂ । ಪಿರಿದಿಂತೀಪರಿಯಿಂದೆಕೊಟ್ಟನದರಿಂದಳ್ಕರ್ತರ್ನೀಂಬಾಲನಂ ॥ ಅರವಿಂದಾನನೆರಕ್ಷಿಸಾಪದೆಪಿನಿಂಪುತ್ರಂಮಹಾಭಾಗನಾ । ಗಿರೆಮುಪ್ಪೊಳ್ಮಗಿಲೆಮ್ಮರಕ್ಷಿಸಿಕರಂತ್ರಾರಾಜ್ಯಮಂಗೆಯ್ದಪಂ ॥ ೧೦ ॥ ಎಂದರಸಂ ನುಡಿಯೆ ಚಂದ್ರಮತಿ ಕುಮಾರನಂನೋಡಿ;

ವೃ॥ ಬಳೆಗಳ್ಗಳ್ಕೆನೆತೋಳ್ಗಳಂನೆಗಪಿತಳ್ಕೈಸುತ್ತೆನೇತ್ರಾಬ್ಜದಿಂ । ದಿಳಿಯಲ್ಪಂತೆಸದಚ್ಚನೀರ್ತೆಗೆದುಮುಂಡಾಡುತ್ತೆತನ್ನಂಕದೊಳ್ ॥ ನಲವಿಂಕುಳ್ಳಿಸುತ್ತೆಪಾ

ಲ್ತೊರೆದುಪೋಯಲ್ಕೀಹದಿಂಕರೂರ್ತಿಬ । ಳ್ವೆಳಪಾಘ್ರಾಣಿಸಿಶೀರ್ಷಪಂತಣಿದಳಾ
ಪದ್ಮಾಕ್ಷಿಸಂತೋಷದಿಂ ॥ ೧೧ ॥ ಅಂತು ತಣಿದು ; ವೃ॥ ಭಾರತ
ಭೂಮಿಯುನ್ನತಿಯನಾಳ್ದುದುಚಂದ್ರಕುಲಂಪ್ರವರ್ಧಿಸಿ । ತ್ರೀರಸಗಾತ್ಮನಾಥನೊ
ಗೆದಂದಿಟಮಾಪುದುದೇವರೇಳ್ಗೆಸಂ ॥ ಪಾರವೆದೀಗಸಾರವೆನಿಸಿತ್ತುಮದೀಯುವು
ನೋಳ್ಪೆಯಿಂದುಸಂ । ಪೂರಿತಮಾಯ್ತುವಲ್ಲಭಕುಮಾರನನೀನೆನಗಿತ್ತುದೂಸರಿಂ ॥
॥ ೧೨ ॥ ಎಂದು ನುಡಿದರಸಿಯು ನುಡಿಗರಸಂ ಸಂತಸಂಬಟ್ಟು ;
ಕಂ॥ ಪಿರಿದುಂಕುವರನನೀಯಲು । ಮುರದಿಂಕೊಂಡುಯ್ಯಲುಂರಮೋಶನೆಕರ್ತೆಂ॥
ಹರಣಂಭರಣಂವಿಷ್ಣುಗೆ । ಸರಿಸರಿಯಿಲ್ಲಿಲ್ಲಕೊಲ್ವಸಲಹುವದೇವಂ ॥ ೧೩ ॥
ಎಂದುಸಿದು— ರಾಜಶೇಖರಂ ಶುಭದಿನ ಮುಹೂರ್ತದೊಳ್ ; ವೃ॥ ವರಶಶಿ
ಬಿಂಬದೊಳ್ಕುಟಿಲಮುಂಕರೆಯುಂಸಲೆಯೊಂದಿನಿಂದಿರಲ್ । ತರಳನದಂಲಸದ್ವದನ
ದಿಂಜಯಿಸುಂನಿಜಮೆಂದುಪಂಡಿತರ್ ॥ಪರಿಕಿಸೆತೂರ್ಯನಿಸ್ವನಮದೆತ್ತಲುಮುಬ್ಬಿರೆಚಂ
ದ್ರಹಾಸನೆಂ । ಬುರುತರನಾಮಮಂನೆಗಳ್ದನಾಧರಣೀಪತಿಯೇಮದಾನದಿಂ ॥೧೪॥
ವೃ॥ ಮೃದುಕರನಾತ್ಮಮಂಡಲಸುರಕ್ತನಮೋಯುಕಲಾಪಕಾಂತಿಸಂ । ಪದನೆನಿಪ್ಪೊಂ
ದುನಾಮಮೆಸೆದುಂಕುಟಿಲಂಕ್ಷಯಿದೋಷಿಮಿತ್ರನ ॥ ಭ್ಯುದಯಕಸರ್ವನೀಕುವಲಯ
ಕ್ಕೆರೆಯುಂಪಿರಿಯಪ್ಪನೀಎನು । ತ್ತೊದವಿನೆಗಳ್ತೆಯ್ದನಕ್ಕನರಪಾತ್ಮಜಗೀಪುನಾಮ
ಮೊಪ್ಪದೇ ॥ ೧೫ ॥ ಕಂ॥ ಕಂದುಂಕುಂದುಂಪೊಂದದ । ಸುಂದರನೃಪ
ಪುತ್ರನಾಸ್ಯದಿಂಜಸಮೆಳ್ಪಿಂ ॥ ಚಂದಿರನಂತಮೆಜಯಿಸು । ತ್ತುಂದಂಮಿಗೆಚಂದ್ರಹಾಸ
ನಾಮಮನಾಂತಂ ॥ ೧೬ ॥ ಕಂ॥ ಮನುವಿಧಿವಿದಿತಂಸರಪಂ । ಧನಕನ
ಕಾಮೂಲ್ಯರತ್ನಪಸನಾದಿಗಳಂ ॥ ಜನತತಿಗೆಕೊಟ್ಟನಮಿತಂ । ಮನಹೊಸೆದಿಂತಾ
ತ್ಮಜಂಗೆನೆಗಳ್ದಂಪೆಸರಂ ॥ ೧೭ ॥ ಅಂತು ಪೆಸರ್ಗೆಯ್ದು ಶೈಶವಂಪತ್ತು
ವಿಡೆ ಧರಣಿಪಂ ಬಿಜ್ಜೆಗಲಿಸಲ್ಕೆಂದು ಚಂದ್ರಹಾಸನಂ ಸಕಲವಿದ್ಯಾವಿಶಾರದರೆಳ್ನೆ
ಯೋಜಿಸೆ ; ಕಂ॥ ಪೊಸಪೊಗರಂಪೊಣ್ಮಿಸಿದಂ । ಪೊಸಬಿಜ್ಜೆಗಳೋಜೆ
ಯೆಲ್ಲಮಂತಿಳಿದುದರಿಂ ॥ ದೆಸೆವಕರೆಗಳೆದಪ್ಪಿಡಿ । ಯುಸುಕದಬಗೆಯಂಸರಸ್ವತೀ
ಮುಖತಿಲಕಂ ॥ ೧೮ ॥ ಕಂ॥ ಗುರುಗಳಬಿಜ್ಜೆಯದೆಲ್ಲಂ । ತರಳನಸಂಗ
ತಿಯೊಳಮಮಲದುದುಮಾತೇ ॥ ನರವಿಂದಿನಿಜನಪನಸಂ । ಕರದಿಂದಲರ್ಪ್ಪಂತೆ
ವಿಮಳಮಬ್ಜಾಕರದೊಳ್ ॥ ೧೯ ॥ ಕಂ॥ ನೆರೆಯದುಗುರುಗೀಪರಿಮಿತಿ।
ವರವಿದ್ಯೆಯುದೆಲ್ಲನೆರೆದುದೀತರಳಂಗೊ ॥ ಪ್ಪಿರೆತಂಗೊಳಕಿಲ್ಲದರಳೆ । ಸರಸೀಜಾತ
ಕ್ಕನೆರೆದಪರಿಸುಂದಾಗಳ್ ॥ ೨೦ ॥ ಕಂ॥ ಸಮನಿಸಿದುವಾಗಬಗೆಯೊಳ್।
ಕ್ರಮದಿಂದನವದ್ಯರಾಜವಿದ್ಯೆಗಳೆಲ್ಲಂ ॥ ವಿಮಳನತರಳನಗಗನದೊ । ಳಮಳಿನತಾ
ರಾಳಿನೆಲಸಿರಂಜಿಪಪರಿಯಿಂ ॥ ೨೧ ॥ ಕಂ॥ ಸಸಿಯಿಂರವಿಯಿಂಮಧುವಿಂ।
ಪೊಸನೆಯ್ದಿಲ್ಕಮಲಮಾವುಮೊಗರೆಂದಿವಂ ॥ ತಸಮತರರಾಜವಿದ್ಯೆಗ । ಳೆಸೆದಂ

ಚಿತ್ತವುಕುಮಾರಕುಸುಮಾಯುಧನಿಂ || ೨೨ || ವೃ|| ಸುರುಚಿರಶಸ್ತ್ರ ಚಾಪಶರವಿದ್ಯೆಯನುದ್ಘುತುರಂಗಹಸ್ತಿಬಂ | ಧುರರಥವಾಹಕತ್ವಮನಶೇಷಸುಗಾನಸುಕಾವ್ಯಶಬ್ದಭಾ || ಸುರಕವಿತಾವಿಶೇಷವುಮಮಂದಬಲಿಷ್ಠಸಮೇಯುವೈಭವಂ | ನರಪತಿಪುತ್ರನೊಲ್ದುತಿಳಿದಂಸಕಲಾಗಮನೀತಿಶಾಸ್ತ್ರಮಂ || ೨೩ || ಅಂತು ರಾಜಪುತ್ರಂ ಸಕಳಕಳಾ ಪ್ರವೀಣನಾಗಿ ಧನುರ್ವಿದ್ಯಾ ವಿಳಾಸನಾಗಿರ್ಪಿನಂ ;

ಕಂ|| ಮೊಗದೊಳ್ನಗೆವುಗೆಗಮನದೊ | ಳ್ಸೊಗುಮಿಗೆಯಿಂಮಾಂದ್ಯಮಾಳ್ದಿರಲ್ಕಡುನುಣ್ಪಿಂ || ಪೊಗರಿಂನುಡಿತೊಡೆತೊಡರ್ದರೆ | ಮಿಗೆರಾಗಂಮನದೊಳಾಗೆನರಪತಿಸುತನಂ || ೨೪ || ವೃ|| ನೆರೆದುದುಜವ್ವನಂಸೊಬಗುಚೆಲ್ವುಸುರಾಗಮನಂಮನೋಹರಂ | ನೆರೆದಿರೆಲೀಲೆಯುತ್ಸವಮುದೆಲ್ಲಕುಮಾರನದೇಹದಲ್ಲಭಾ || ಸುರತೆಮುಖಾಂಬುಜಕ್ಕಮರೆಮೆಯ್ಸಿರಿಯೊಳ್ಕಡೆಗಣ್ಣಕಾಂತಿಯೊಳ್ | ನರಪತಿಪುತ್ರನಿಂತುತಳೆದಂಪೊಸಜವ್ವನಮಂಸರಾಗದಿಂ || ೨೫ || ಕಂ|| ಬಡನಡುಪೇರೆರ್ದೆಬಲ್ದೊಡೆ | ಕಡುಜೋಳ್ಬಲ್ಗಂದವಿಸಾಸೆಪೊಗರುಗುವಮೊಗಂ || ಕಡುಚೆಲ್ವುಬೀಱಸವಿನುಡಿ | ಯೆಡೆಗೊಂಡುದುರಾಜಪುತ್ರನಂಗದೊಳಾಗಳ್ || || ೨೬ ||

ವೃ|| ಸರಸತಿವಕ್ತ್ರದೊಳ್ನಲಸೆವಾಣಿಯುಕೆನ್ನವುರಂಬೊಲಾಯ್ತುಕೆ | ಣ್ಪುರವುಗಳೆಲ್ಲಿ ಬಂದೆರಗಿಮೆಲ್ಲಡಿಯಿಂಚರಿಯಿಂತುವಂತೆಬ || ಲ್ಕೆರೆದುವುಗ್ರಾಸಿಶತ್ರುಪುರವರ್ಗ್ಗಳವುಂಮುರಿವಂತೆದುಡುದೋಳ್ | ಮೆರೆದುವುಬಪ್ಪಿನಿಂತೊಡೆಗಳುಂರಿಪುವಂತುಳಿಪೊಂದುಬೀರದಿಂ || ೨೭ || ಕಂ|| ಪೊರೆದವುಸಿರಿವೆಣ್ಣೊಲಸ | ಲ್ಸಿರಿಯುರ್ದೆಪಿರಿದುಂವಿಶಾಲಮಾದುದುಭುಜದೊಳ್ || ಮೆರೆದಿರೆವಿಜಯಶ್ರೀಸತಿ | ಪಿರಿದಳ್ದವಡಿಂಕಡಂಗಿಜಸಸಿರಿಜಗದೊಳ್ || ೨೮ || ವೃ|| ಎಸೆದುದುಯೌವನೋದಯುವಿಳಾಪತಿಪುತ್ರನದೇಹದೊಳ್ಸಮಂ | ತುಸಸಿಯುರುಳ್ಸರದ್ರುಮದೆಪುಷ್ಪಸುಮಂಜರಿನೀರಜಕ್ಕೆಬೆಂ || ಬಿಸಿಲೆಸೆವಂತೆಚೆಲ್ವಿಕೆಗೆಗೊತ್ತುಗುಣಕ್ಕಣಿಗಾಡಿಗಾಗರಂ | ನಸೆಗನಕಾವನೆಂಬತುಳಿಲಾಳವಿಳಾಸಕೆತಾಣಮೆಂಬಿನಂ || ೨೯ || ವೃ|| ವರವಕ್ತ್ರಾಂಭೋಜಚಂಚನ್ಮಧುಕರಗಣಮೋವೀರವೈಶ್ವಾನರಪ್ರೋ | ತ್ತರತುಂಗೋದ್ದಾಮಮೋಯವ್ವನಮದಗಜದರ್ಪ್ಪಾನಮೋದೇಹಚಿತ್ರ || ಸ್ಫುರದುದ್ಯಜ್ಜೀವನೀಲಪ್ರಭೆಯೊಮತಿಸುಧಾರೋಚಿಲಕ್ಷ್ಮಾಂಕಮೋಎಂ | ಬಿರವಿಂತಾಂಶ್ಮಶ್ರುಕೂರ್ಚಂತಳೆದುದುಸೊಬಗಂರಾಜಪುತ್ರಾಸ್ಯದೊಳ್ದಲ್ || ೩೦ || ಕಂ|| ತನುವಲ್ಲಿಗೆಮಧುವಿಭವಂ | ಘನಶೌರ್ಯೋದಧಿಗೆಚಂದ್ರನುದಯುಂಸುತನೊಳ್ || ಮನಸಿಜನಕೆಜ್ಜಕೆಸಕಮಿ | ದೆನೆಹರೆಯಂತೊಗಿತರರೆಕಣ್ಗಂಮನಕಂ || || ೩೧ ||

ವೃ|| ಜಲಜಾತಾಯತಲೋಚನಂಫಲಕಫಾಲಂವಜ್ರದಂತಾಳಿಸ | ತ್ಕಳಧೌತಾಮಳಕಾಂಚುಕಾಂತಿವಿಲಸದ್ಬಿಂಬಾಧರಂದೀರ್ಘಬಾ || ಹುಲಸತ್ಪಲ್ಲವಪಾಣಿರಂಜಿತಕಪೋಲಂಹೇಮರಂಭೋರ | ಳ್ಕಳಿಮೊಪ್ಪಲ್ಧರಣೀಶಸೂನುತಳೆದಂಸೌಂದರ್ಯಸಂಪ

ತ್ರಿಯಂ ॥ ೩೨ ॥ ಕಂ॥ ಅರಮಗನರೂಪುಪೆಣ್ಗಳ । ನರವರಿಸದೆನೋಡಿದನಿತುಮಾತ್ರದೊಳಮಮಾ ॥ ಮರುಗಿಸಿನಾಣ್ಗೆಡಿಸಿತ್ತುರೆ । ಕೊರಗಿಸಿತೆಳದಳಿರಪಸೆಯೊಳುರದಿಂಭರದಿಂ ॥ ೩೩ ॥ ವೃ॥ ಜನಪತಿಪುತ್ರನಾನನಮನೀಕ್ಷಿಸಿಜವ್ವನದೇಳ್ಗೆವೆತ್ತಸು । ವ್ಮನದಪೆಡಂಗುಗಾತಿಯರಳಲ್ದುಬಳಲ್ದುನಿಸ್ಪೃಷ್ಟಮನ್ನದೋ ॥ ದ್ಘನಸುಮರೋಪದಿಂಬನದೆನೋಡುತೆಚಂಗ್ರಮನಂಸರೋಜಮಂ । ನನೆಯುತೆರಾಜಪುತ್ರಮುಖಮಂಪೊರಳ್ವರ್ಸುಮಶಯ್ಯೆಯೊಳ್ವಲಂ ॥ ೩೪ ॥

ಕಂ॥ ಸಿರಿಕಂಡಗಂದದಿಂಶಶಿ । ಕಿರಣದಿನಳಮಾಘಜಲದೆಪ್ಪುಡಿಗಪ್ಪುರದಿಂ ॥ ನರಪತಿಯಸುತನಬಿರಹಮ । ನುರದಿಂಕಳೆಯಲ್ಕೆಸಾಲರಾಬಿತ್ತಗೆಯರ್ ॥ ೩೫ ॥

ಮಾಲಿನೀವೃತ್ತಂ॥ ಸಮುದಿತವಿಭವಾರಂಭಪ್ರಲಂಭಪ್ರಮೋದ । ಕ್ರಮವಿಹಿತವಿವಾಹೋತ್ಸಾಹಸೌಂದರ್ಯರಾಮಾ ॥ ಪ್ರಮದವಿತತಸಂಗೀತಾಮಳಾಂಕಾಳಿನಾಮ । ಕ್ರಮವಿಶದಗುಣೌದಾರ್ಯಪ್ರವೃತ್ತಂಸುವೃತ್ತಂ ॥ ೩೬ ॥ ವೃ॥ ಸರಿಮಿಗಿಲ್ಲದತ್ಯಧಿಕಸಂಪದಮಂನೆರೆತಾಳ್ದುಭೂರಮಾ । ವರಸುತನುದ್ಧತಕ್ಕೆತವೆಭಾಜನನಾಗದೆಸದ್ಗುಣಂಗಳಂ ॥ ಸರಸಿಜದಂತೆತಾಳ್ದನದುಕಂಮತವಲ್ಮೆಸದಾಳಿಸೇವಿತಂ । ವರಘುನಮಿತ್ರಸಂಪದಹಸಂಕಮಲಾಕರರಾಗರಂಜಿತಂ ॥ ೩೭ ॥ ಅಂತು ಪಾರೂಢತಾರುಣ್ಯನಾಗಿ ರಾಜಪುತ್ರಂ ರಾರಾಜಿಸುತ್ತಿರೆ ; ವೃ॥ ಮದನಂಗಂದಗಟೇರೆವಕ್ತ್ರಶಶಿಯೆಂಬಕ್ಕೆಯ್ದೆಶುಭ್ರಾಂಶುಸಂ । ಪದಮುರ್ಬಲ್ತೆಳಿರ್ಚತ್ತೆಕೆಚ್ಚನೆಸೆಯಲ್ನೇತ್ರಾಂಬುಜಂಪೊಂಗಿಪೆಂ ॥ ಪೊದವಲ್ಪುಗುಡಿದೋರೆಸತ್ವರದೆಮಾಕಂದಂಮನೋರಂಜಿತಂ । ಪುದಿದತ್ತುರ್ವಿಪನಂದನಪ್ರಮದಚಂಚನ್ಮಾಧವಂಲೋಕದೊಳ್ ॥ ೩೮ ॥ ಎಂದು ಬಲ್ಲರ್ಬಗೆಯೆ ; ವೃ॥ ವರಭೃಂಗಸ್ವನಗಾಯನಂಶುಕರವಂಭೇರೀರವಂಕೋಕಿಲ । ಸ್ವರಶಂಖಧ್ವನಿಪೂತಚೂತಸಿತಹಂಸ್ತೋತ್ರಾತಪತ್ರಾಳಿಬಂ ॥ ಧುರವಂತಾಹತನಮ್ರವಲ್ಲಿಮೃದುಲಾಸ್ಯಂಚಾಮರಂಪಲ್ಲವಂ । ತೊರೆಯುಲ್ಬಂಡನಮೋಯನಂದನವನಶ್ರೀಮಾಧವಂಮಾಧವಂ ॥ ೩೯ ॥ ವೃ॥ ಬಿರಯಿಗಳಾರೆಮಾಮರಕೆಚೆಂದಳಿರೇರೆಪಿಕಕ್ಕೆಸಾರೆನು । ಣ್ಬರಮಳಿಗಾಪೆಕೆಂಪುಮುಗಿಲೇರೆಸಮೀರಣಮೆಳ್ದುತೋರೆಪಾ ॥ ದರಿಮಿಗೆಮೊಗ್ಗೆಯಂಗೆಮದನಂಗದಟೇರೆಸುಖಾಳಿಮೀರೆಬಂ । ದುರುತರಚೈತ್ರಮಾಸಮದುಮಾಡಿದುದೀಜಗಕೆಯ್ದೆತೋಷಮಂ ॥ ೪೦ ॥ ವೃ॥ ಸರಸಿಜದಿಂದೆಕಾಮಿನಿಯರಾನನಪದ್ಮಮನಂತೆಚಂದ್ರನಿಂ । ದಿರದವರಾಕಪೋಲಮನಮೋಘಲತಾವಿಭವಂಗಳಿಂಸ ॥ ದ್ವರತನುವಂರಸಾಲದಳದಿಂಮನಮಂಮಿಗೆರಂಜಿಸುತ್ತೆಭಾ । ಸುರವನದೇವತಾಧಪನಮಂಮೆರೆದಂಬಹುರಾಗಸ್ರಮಂ ॥ ೪೧ ॥ ವೃ॥ ಅಳಿಕುಲನೀಲಕಾಯುಮದುನೀರದಮಾಗಿರೆತದ್ರಮಂಸಿಡಿ । ಲ್ಮೊಳಗುವರೀತಿಯಿಂದಿರೆಚಳಲ್ಲತಮಿಂಚೆರೆಮೊಲ್ಲೆಮೊಗ್ಗೆಗ॥ ಳ್ಮಳೆವನಿಯಾಗೆಬಂದುಗೆಯಪೂಗಳೆಬಂಧುರಮಿಂದ್ರಗೋಪಮಾ । ಗೆಳೆಯೊಳದೇ

ನೊಕ್ಕೆಣಲರಿದಾಯ್ತು ಬಸಂತವೊಕಾರಕಾಲಮೋ ॥ ೪೨ ॥ ವೃ॥ ಲಸದು
ದ್ಯದ್ದಕ್ಷಿಣಾಗ್ರಸ್ಫುರದುರುಮಲಯೋರ್ವೀಧರಪ್ರಸ್ಫುರಸಚ್ಚೈಲಂ । ಗಸದಾಸಂಚಾರ
ಭಾಸ್ವದ್ವರಸುರಲಲನಾವಿಶ್ಲಥೋತ್ತುಂಗವೇಣೀ ॥ ಪ್ರಸುವೋದ್ಯನ್ಮಂಜರೀನಿರ್ಗ
ತನಿಬಿಡರಜಃಕೀರ್ಣಸೌರಭ್ಯಸಾರಂ । ಪೊಸತೇಂ ಖಂಡತ್ತೊ ಮಂದಾನಿಲನಸಪಸದಿಂ
ಚಂದನಾಗಾಹಿಪೀತಂ ॥ ೪೩ ॥ ವೃ॥ ಕೊಳದೊಳಗಾಳ್ದುಮಿಂದುಸರಸೀಜಪ
ರಾಗಮನೊಟ್ಟಿಕೊಂಡುಬಂ । ದೆಳಲತೆಯೆಲ್ಲಮಂ ಕೆದರಿಭೋಜಮನುದ್ಧಿರ್ಸುಗಂಧ
ದಾನಕೊ ॥ ಲ್ಲಿಳಸುತೆಬರ್ಪತುಂಬಿಗಳಪೊಲ್ಸರಮಂ ಮಿಗೆಕೇಳ್ದುಬಂದುದಾ । ವಿಳ
ಸಿತ ತಾದಮನ್ಮಥಗಜಂನಡೆವಂತಿರೆದಕ್ಷಿಣಾನಿಲಂ ॥ ೪೪ ॥ ವೃ॥ ಪಿರಿದೆ
ತ್ತುಂಮಲಯಾದ್ರಿಶೃಂಗವಿಲಸಚ್ಛ್ರೀಖಂಡಭೂಜಾಳಿಬಂ । ಧುರವೇಶ್ಮಂಗಳೊಳೆ
ಯ್ದೆಭೋಗಿಮಿಥುನಂಸಂಭೋಗಿಸುತ್ತುಂದುಪೀ ॥ ರ್ಗರೆಮಂದಂಬರುತಿರ್ಪವಾತ
ಮದುತ್ತಾಂಬೇಗಂಮಿಯೋಗಾಕುಳೋ । ದ್ಭರಚೋಳೀಪತಿಖಿನ್ನಸಿಂಹಳವಧೂನಿಶ್ವಾ
ಸದಿಂದೆಯ್ದುಗುಂ ॥ ೪೫ ॥ ವೃ॥ ತಳಿರಲರಾಂತಚೂತನಿವಹಂನನೆದೋ
ರುವಪೊಲ್ಲೆನೀರಜಂ । ತೊಳಗುವತಂಗೊಳಂಮುಗುಳನಾಂತದಿಪುರ್ತ್ತೆತಳಿರ್ತ
ಶೋಕಮುಂ ॥ ಬ್ಬಳಿಪಸುಮಂಗಳಿಂ ವಿಸ್ಫುಪಚಂಪಕಕಿಂಶುಕಪಾಟಲೀಚಯುಂ । ವಿಲ
ಸಿತಮಾಗಿಪೂತತರುಸಂಚಯಮೀ ಮಿಗಿಲೆತ್ತನೋಳ್ಪೊಡಂ ॥ ॥ ೪೬ ॥
ವೃ॥ ಜಲಜಾಸ್ಯಂಪೊಸಪೊಗ್ಗಗಳ್ಕ್ಮಡವಿಮಲ್ಲೀಪುಷ್ಪಗುಚ್ಛಂಕುಚಂ । ವಿಲಸ
ತ್ಕೋಮಲಪಲ್ಲಿಕಾಲಸಿತವಲ್ಲೀದೇಹಮಾರೋಮರಾ ॥ ಜಿಲಸನ್ನೀಲತಮಾಲವಲ್ಲಿ
ರಿಯುದಾಗಲ್ಕವ್ವೆನಂಬಂದಪೊಲ್ । ಪೊಳೆದಳ್ನಂದನಲಕ್ಷ್ಮಿಕಣ್ಗೆಖುತುರಾಗೋದ್ರೇ
ಕದಿಂಸೊಂಪಿನಿಂ ॥ ೪೭ ॥ ವೃ॥ ತಳಿರಿಂರೋಮಾಂಚಮಂಷಟ್ಪದಕಳರವ
ದಿಂಗೀತಮಂಪುಷ್ಪಸಾರಂ । ಗಳಿನಾತಾಂಬೂಲಸಾರಂಗಳನಲರ್ಪಲಿಂಹಾಸಮಂ
ಮಂದವಾತಂ ॥ ಗಳಿನಾನಿಶ್ವಾಸಮಂಮಲ್ಲಿಗೆಯಳಿಗಳಿನಾಕಣ್ಣಕರ್ಪಂಮಧೂದಂ ।
ಗಳಿನಾಹರ್ಷಾಶ್ರುವಂಬಿತ್ತರಿಸಿವನರಮಾದೇವಿಕಣ್ಗೆಡ್ಡಮಾದಳ್ ॥ ೪೮ ॥
ಕಂ॥ ಪಿಕಕಳರವದಿಂಬನರಮೆ । ಸುಕರಂಮಾಧವನನೆಯ್ದೆಕರೆದುಯ್ವುದಲು ॥
ತ್ಸುಕದಿಂಮಾಮಿನಮನೆಯೊ । ಳ್ವಿಕಸಿತಋತುರಾಗಭಾವದಿಂದೊಡವೆರೆದಳ್ ॥ ೪೯ ॥
ವೃ॥ ತರುಕುಲಮೆಲ್ಲಮುಂಕಳಿಕೆಯಿಂಮೊನೆದೋರದಮುನ್ನಮೆಯ್ದೆಸ । ತ್ವರದೊಳ್ಪ
ದ್ಮಮೆಲ್ಲಮುರದಿಂತಲೆಯೆತ್ತದಮುನ್ನಮೆಯ್ದೆಬಾ ॥ ಸುರಪಿಕಜಾತಿನುಣ್ಚರದೆಕೊ
ಗದಮುನ್ನಮೆಚೈತ್ರನೆಯ್ದುವಾ । ಪರಿಯುನೆಸೂಚಿಪಂತೆಮಧುದೂತಿಕರಂನೆಯಾಂ
ತುರಂಜಿಕುಂ ॥ ೫೦ ॥ ವೃ॥ ಮದನಂಗೆಲ್ಲಮನಾನೆಪೂಣ್ದುಪೊರಡಲ್ಕಲ್ಲೀ
ಲಕ್ಷಾತಿಸ್ವಿಯರ್ । ಪದೆಪಿಂಪೂವಲಿಸೂಸೆಕೀರಮುರದಿಂಭೇರೀರವಂಗೆಯ್ಯಗಂ ॥
ಮುದದಿಂಲಿಸ್ಯಮನಾಡೆಬರ್ಹಿಪಿಲಸಚ್ಚತ್ರೋದ್ಭಟಕರ್ಣರಕಾ । ಸ್ಪದಕಸ್ತ್ರೀಳ
ಯುನಾಂತುಪಲ್ಲವಲಸದ್ಗಾತ್ರತ್ರಮಂತೊಟ್ಟಪರ್ ॥ ೫೧ ॥ ವೃ॥ ಅಳಿಯುಂ

ಪುಷ್ಪಂಗಳಿಂದಂ ಪೊಱವುದೆನಗೆಪ್ಪುದಸ್ತ್ರಮಿಾಗಳ್ಶುಕತಂಗ | ಳ್ಗೊಲವಿಂಬೆಂಬಣ್ಣಾ
ಳಿಂತಾಂಕುಡುಗುಮುಲಿಯನೊಲ್ದಿೞಗುಮಿಾಪುಷ್ಪಸಾರಂ || ಗಳಿಸೆನ್ನೀಕೋಕಿಲ
ಸ್ತೋಮಕೆರತಿಗವತಂಸಂಗಳ್ಗುಂನಲ್ಲಟಿಂ | ದಳಿರಿಂದೀಭೂಜಮೇಮಾಮರಮೆ
ನುತೊಲವಿಂವೀಕ್ಷೆಗೆಯ್ದಂಮನೋಜಂ || ೪೨ || ವೃ|| ಕಾವನಕಸ್ತ್ರಶಾ
ಲೆಪುಲಯಾನಿಲನಾಡುವಮಾಡುವೆಟ್ಟಕೀ | ರಾವಳಿಯುಣ್ಬಗೇಹಮಧುಭೂಮಿಪ
ಕೋಶಗೃಹಂದ್ವಿರೇಫಸಂ || ಭಾವಿತಮದ್ಯಶಾಲೆಪಿಕಪಾಠಗೃಹಂಋತುಸಾರ್ವಭೌ
ಮಲ | ಕ್ಷ್ಮೀವರನೋಲಗಂವರಲತಾನಟರಂಗಮಿದಲ್ತೆಮಾಮರಂ || ೪೩ ||
ವೃ|| ನನೆಗೋಲೆಂಬಂತೆಪೂವಂಪಡೆದಿದುಕರಮೊಂಬಂತೆಭೃಂಗಾಳಿಯಂಗ | ಳ್ಕನೆ
ಪುಂಡ್ರೇಕ್ಷುರ್ಲತಾಚಾಪಮನೆಪಿಡಿದುದೆಂಬಂತೆಕೊಂಬಂಮನೋರಂ || ಜನೆಯಿಂ
ಕೈವಂದುಕೈಗೊಟ್ಟನಗನುನಯದಿಂದಾಂತುನಿಂದಿರ್ದುದೀಮಾ | ವೆನುತೊಲ್ದಾಮ
ನ್ಮಥಂಸಂಭ್ರಮದೊಳೆಸಹಕಾರಾಖ್ಯೆಯಂಗೆಯ್ದನಾಗಳ್ || ೪೪ ||
ವೃ|| ತಳಿರ್ಗಳೆಕಾಸೆಷಟ್ಪದಕಳಧ್ವನಿಗೆಜ್ಜೆಗಳಾರವಂಲಸ | ದ್ವಿಳಸಿತಪುಷ್ಪಗುಚ್ಛ
ಚಮರಂಮೆಱೆಯಲ್ವರರಂಗದಲ್ಲಿಕಂ || ಗೊಳಿಸೆಮದೋದ್ಧಕೀರಪಿಕರಾವಮೆಗೀತಮ
ದಾಗೆನರ್ತಿಪಳ್ | ವಿಳಸಿತಮಾರಸಾಲನಟಿಸೂತ್ರಕನಾಗಿರೆಮಂದಮಾರುತಂ || ೪೫ ||
ವೃ|| ಅಲರ್ಗಳಗುಂಪಿನೊಳ್ಮಧುಪಸ್ಯಂದಸುಗಾನಮದಲ್ಲದಾತಳಿ | ರ್ಗಳಪೊದರೊ
ಳ್ಪಿಕಾಳಿಗಳಸಂಮದಗೇಯಮದಲ್ಲವಿನ್ನುಪ || ಣ್ಗಳನೆಲೆಯೊಳ್ಶುಕಾಳಿಗಳಸಾದರವಾ
ದುಲಿತೋರೆಮಾಮರಂ | ಪೊಳೆವುದುಚೈತ್ರಗಾನರಸದಿಂಬಳೆದಾಮರಮೆಂಬಪಾಂಗಿ
ನಿಂ || ೪೬ || ಕಂ|| ಗಿಳಿಕಲಕಂಬೆಂದಳಿರ್ಗಳ್ | ತಳೆಪೂಗುಡಿಜಲ್ಲಿಕೊಂ
ಬುಪಳಯಿಗೆಯಾಗಲ್ || ಪೊಳೆವುದುಮದನನರಥದಂ | ತೆಳವಾವೊಂದಲ್ಲಿಕಣ್ಗೆಪೊಸ
ತೆಂಬಿನೆಗಂ || ೪೭ || ಕಂ|| ಕುಡುವಿಲ್ಲನಮದಗಜಮಿದು | ನಡೆತಪ್ಪದುಗಾ
ಳಿಯಿದಕೆತಡೆಯದೆನಸೆಗರ್ || ನಡೆವುದುಬನದಿಂದೇದಾ | ಕೆಡುನೊಕ್ಕಿಂದೊಂದು
ಕೋಕಿಲಂದನಿಗುಡುಗುಂ || ೪೮ || ವೃ|| ಅಱುತೆರ್ದಿಯಾರಿಸೋಲ್ದುಪಿರಿ
ದುಂತನಿವಣ್ಗಳನೋಡಿಸಾರ್ದುಬಂ | ಬಿರದಮರ್ದಪ್ಪಿಚಂಚುಪುಟದಿಂಕೊರೆದೊ
ಯ್ಯನೆಪಾಯ್ವಪಣ್ಣಬಂ || ಧುರರಸಧಾರೆಯಂಸವಿದುಕಣ್ಮುಗಿದಾಗಳೆತನ್ನನಲ್ಲಳಂ |
ಕರೆದಿದಿರಾಂತುಕೊಟ್ಟುರಸಮಂತಣಿಗುಂಶುಕಮಾಮ್ರಭೂಜದೊಳ್ || ೪೯ ||
ಇಂತೆಸೆವ ಮದನಸಹಕಾರಿ ಸಹಕಾರಂಗಳಲ್ಲದೆಯುಂ ; ವೃ|| ಪಟುಕೋ
ಪಾಟೋಪಬದ್ಧಭ್ರುಕುಟಿಕುಟಿಲಫಾಲಂಸ್ಮರಂಪೂರ್ಣಕೋಪ | ಸ್ಫುಟವಕ್ತ್ರಂಪುಲ್ಲ
ನಾಸಂಬಿರಯಿಗಳುರಮಂಭೇದಿಸಲ್ಕೆಂದುತನ್ನು || ತ್ಕಟಶಾತಾಸ್ತ್ರಂಗಳಂಬೇಕಿ
ಯೊಳೊಗುಮಿಗೆಯಿಂಕಾಯ್ಸಿಪೂಜಿಪ್ಪನೆಂಬಂ | ತುಟಿತಾನೇನೆದ್ದಮಾಯ್ತೋಪವ
ನಚಲಿತಚಂಚತ್ಪಲಾಶಂಪಲಾಶಂ || ೫೦ || ಕಂ|| ಸ್ಮರಕರಿಶಿರಸಿಂದೂರಂ |
ಪರವನವನಧಿಪ್ರವಾಳಮಡುವಿೞಹಿಜನೋ || ತ್ಕರತನುರಕ್ತಾಸ್ತ್ರಂದ | ಲ್ಕರವೆಸೆ

ದುದುಮುತ್ತುಮತನುಹರಿನಖರಂಬೊಲ್ ॥ ೬೧ ॥ ಕಂ॥ ತರುಣಿಯುರಲಕ್ತ್ಯೆ
ಕಾಂತ । ಸ್ಫುರದುರುಪದಘಾತಮೆಯ್ದಿತಳ್ತಿರ್ದಿತನ್ನೊಳ್ ॥ ಮೆರೆದುದುತಳಿರಲರ್ಗಿಂ
ಪಿಂ । ಪಿರಿದುಮಶೋಕಂಮನೋಹರರಾಗಾಂಕಂ ॥ ೬೨ ॥ ಕಂ॥ ಕೊಸ
ಗೆಸೆದುದುಮಿಸುಪಲರಿಂ । ಪೊಸತೆನೆವನಲಕ್ಷ್ಮಿಯಂಗರಾಗಮನೆಲ್ಲಂ ॥ ಮಿಸುನಿಯು
ಭಾಜನಕುಲದೊಳ್ । ಸಸಿನಂಗೆಯ್ದಿರ್ದಪಂಬತೆರದಿಂಬನದೊಳ್ ॥ ೬೩ ॥
ವೃ ॥ ರಮಣಿಯುರುನ್ನತಸ್ತನಪಸೋಂಕಿನೊಳಂಮಧುಬಿಂದುಸೇಕದಿಂ । ವಿಮಳ
ಸುಪಕ್ಷ್ಮನೇತ್ರರುಚಿಯಿಂಪುಳಕಂಘನಘರ್ಮಬಿಂದುಸಂ ॥ ಭ್ರಮತರಹಾಸಮುಪ್ಪತೆ
ರದಿಂತಳಿರಿಂಮುಗುಳಿಂಮಲರ್ಗಳಿಂ । ಕಮನತೆಯಾಂತುಮಾಕುರವಕಂವಕುಲಂತಿ
ಲಕಂನಿರಾಕುಲಂ ॥ ೬೪ ॥ ಕಂ॥ ಸ್ಮರರಾಜರಾಜಗೃಹದೊಳ್ । ತರದಿಂ
ದಂಪೊತ್ತಿಸಿರ್ದದೀಪಾವಳಿವೊಲ್ ॥ ಮರಲಿಂಚಂಪಕನಿಕರಂ । ಕರಮೆಸೆದುದುಪುಕೊಂ
ಬುಕೊಂಬಿನೊಳ್ಮಿಗೆಪೂತುಂ ॥ ೬೫ ॥ ಕಂ॥ ಸಿರಿಮೊದಲಿನೆಯ್ದಿಲೆಯೊಳ್
ಪರಮೆಗಳದನಡರ್ದುಪಲ್ಲಸಿರಿತಾಂತೊಲಗಲ್ ॥ ಮೆರೆಯಲ್ಪರಸಿಜಪಲ್ಲವ । ಮೆರೆದು
ವುಸಿರಿಯಿರ್ಪನಲ್ತೆಸೇವ್ಯಂಧರೆಯೊಳ್ ॥ ೬೬ ॥ ವೃ॥ ಇದುಕಾಮನಾಗಮ
ನಕ್ಕೆಸೂಸಿದಲಸನ್ಮುಕ್ತಾಳಿಯೋಮಲ್ಲಿಕಾ । ಸುದತೀಚೂತಭುಜಂಗಸಂಗಮದ
ಘರ್ಮೋದಂಗಳೋಮುತ್ತುಮಾ ॥ ಮಧುಲಕ್ಷ್ಮೀಕರವಾರಿಯಂತ್ರವಿಕಿರದ್ವಾರಿಗಂ
ಧಸಾರಾಂಬುವೋ । ಮಧುಪಾಳೀಬಹುಪುಣ್ಯಸಾರವೊಇದೇಂಸನ್ಮಲ್ಲಿಕಾಪುಷ್ಪಮೋ॥
॥ ೬೭ ॥ ಕಂ॥ ಪೊಸಮಲ್ಲಿಗೆಯುಳಿವೆಣ್ । ನಸಮಸದಿಂಪಿಟಪಿಪಿಟಕುಲಂ
ಗಳನೊಲವಿಂ ॥ ನಸಿಮಿಗೆನೋಡುವನೋಟದ । ಪೊಂಪರಿಯುಂಪೋಲ್ದುವರರೆಮ
ಧುಪಾವಳಿಗಳ್ ॥ ೬೮ ॥ ವೃ॥ ಅಳಿಬೃಂದಂಪಿರಿದುಂಕಡಂಗಿಕುಡಿಯಲಾತ್ತು
ನಡ್ಡನಾಂತ್ಯೋಂಮದಾ । ನಿಲಸಾಗಳ್ತುವೆಪೊಕ್ಕುಮಿಕ್ಕುಪೊರಿಗಟ್ಟತ್ತಿತ್ತಿಪೊತ್ತು
ಯ್ದಲೇ ॥ ನಿಳದಾಯ್ತೇನವಮಲ್ಲಿಕಾಸುಮುಮದೇಂತುಂಬಿಪ್ಪವಾರಂದದಿಂ । ದೆಳೆ
ಯಂನಾಂದಿಸಿತನ್ನಬೆಳ್ಪಸಮುಪೆಲ್ಲಾತಾವಿನೊಳ್ತುಂಬುಗುಂ ॥ ೬೯ ॥ ಮತ್ತಂ,
ಕಂ॥ ಬಿರಯಿಯೆರ್ದೆಬಿರಿಯೆಬಿರಿದುವು । ಸುರಯಿಕರಂಮುಸುರಿದಳಿಗಳಂಸೌರಭದಿಂ॥
ನೆರೆಯೆಮಧುತನ್ನೊಳೊಲವಿಂ । ನಿರಿಗಳೆದುದುಪರ್ಣಮಿಸುಪದಿನಾಪಾದರಿಯೊಳ್ ॥
॥ ೭೦ ॥ ವೃ॥ ನಲವಿಂಮಾಧವನೆಯ್ತರಲ್ಪಡಗರಂಕೈಮಿಕ್ಕುಕೀರಾರವಂ ।
ಗಳನಾಪೊತ್ತುಗತಮಂಕರಂನುಡಿದುಪೂವಣ್ಣಿರ್ಪಸುತ್ತುಯ್ದಕೋ ॥ ಮಲಪದ್ಮಾಳಿ
ಯಿನರ್ಘ್ಯಮುಂಸಮೆದುಕಾಂನೀರಾಜನಂಗೆಯ್ದನಿ । ರ್ಮಲಸಚ್ಛಂಪಕಪುಷ್ಪದಿಂಬೆಪ
ನಲಕ್ಷ್ಮೀದೇವಿದಲ್ಕೂಡಿದಳ್ ॥ ೭೧ ॥ ವೃ॥ ಪಡೆದಮರ್ದಪ್ಪಿಚಪ್ಪಲರ್ದ
ಪೆರ್ಮ್ಮಲೆಯುಂನಗೆಪುಷ್ಪಗುಚ್ಛಮುಂ । ದದಕಿಸುಗಣ್ಣಳಂನಗೆಸುರಾಗಸಿತಾಂಬುಜಮೊ
ಕ್ಕಘರ್ಮಮುಂ ॥ ಮೃದುಮಕರಂದಮಾಗವಗೆಸುಯ್ಯಲರಂನಗೆತಂಬೆಲರ್ಕಳಂ । ಪ
ಡೆಪಿನೊಳೊಲ್ದುಕೂಡಿನೆರೆದಳ್ವನಲಕ್ಷ್ಮಿವಸಂತಕಾಂತನೊಳ್ ॥ ॥ ೭೨ ॥

ಅದಲ್ಲದೆಯುಂ ರತಿಮದನರ ಸೊಬಗಿನೊಡನೆ ಮಲ್ಲಿಗೆತೆಲ್ಲಯಿ ಸೆಯುಂ ಸೊಬಗೆಯರ ಮೊಗದೊಡನೆ ಸಂಪಗೆಪೆಂಪುವಡೆಯೆಯುಂ ಬಿರಯಿಗಳ ಬಿರುಸುಯ್ಯಳೊಡನೆತಂಬೆಲರ್ನಿಡಿದಾಗೆಯುಂ ಪಥಿಕರಮೊಗದೊಡನೆ ತಮಾಲಂತಳಿರ್ತುಕಳ್ತಲಿಸೆಯುಂ ವಿಯೋಗಿಣಿಯರ ಕಪೋಲದೊಡನೆ ತಿಳಿಗದಿರನತನಿವೆಳಗುಪಜ್ವಳಿಸೆಯುಂ ಕಾಮನ ತೇಜದೊಡನೆ ಬಿಸಿಲ್ಬಿಸುಪುಪಡೆಯೆಯುಂ ಜಿತೇಂದ್ರಿಯರ ಪಲ್ಗಳೊಡನೆದಾಡಿಮಂ ಬಿರಿಸಿಯುಂ ಪತಿಪತ್ನಿಯರ ನೇಹಗಲಹದೊಡನೆ ರಾತ್ರಿಬಡಬಡಾಗೆಯುಂ ಮಿಂತುಪಂದವಸಂತ ಮಾಸದೊಳ್ ; ವೃ॥ ಸುರುಚಿರಪುಲ್ಲಪುಷ್ಪಕುಲದೊಳ್ರತಿಕಾಂತನ ನಾಣಭೇಂಗೃತ । ಸ್ವರಮೆನೆಷಟ್ಪದಸ್ವರಮಶೋಕದೆಕಾಮನಹಸ್ತಿಡಿಂಡಿಮ ॥ ಸ್ವರಮೆನೆಕೋಕಿಲಾವಳಿಯಸುಸ್ವರಮಲ್ಲದೆಮಾವಿನೊಳ್ವಲಂ । ಮೆರೆವುದುಮಂದಿವ್ಯಂಡನಿನದಂಗಳತ್ಪೊಲ್ಯಕಶಬ್ದಮಾತನಾ ॥ ೭೩ ॥ ವೃ॥ ತಳಿರೇಂಸಾಲದೆಕರ್ಬುಸಾಲದೆಲಸಚ್ಚಂದ್ರಾಂಶುಮೇಂಸಾಲದೇ । ವಲೆವೀತೆಂಬೆಲರೇಕೆಸಾಲದೆಳಗೌಂಗೇಂಸಾಲದೇಮಲ್ಲಿಕಾ ॥ ವಿಲಸತ್ಪುಷ್ಪಮದೇಕೆಸಾಲದೆಪಿಕಾಳೀರಾವಮೇಂಸಾಲದೇ । ನಿಳೆಯುಂಜ್ಯಸಲಿದೇತಕೆನ್ನಗಮ ಸಂಸಾಕೆಂದುಮೀನಧ್ವಜಂ ॥ ೭೪ ॥

ವೃ ॥ ಸೊಗದಿಂದಂರತಿಗೂಡಿಪುಷ್ಪಮೃದುಶಲ್ಯಾಸೀನನಾಗುತ್ತೆಸೊಂ । ಪುಗೆಮಾವಂಮಿಗೆನೆಮ್ಮಿತುಂಬಿಗಳಿಯಿಂದಂಸಾಡಿಸುತ್ತೆಯ್ದಿತ ॥ ನ್ನಗನಿಷ್ಕಂಪಿತಶಾರ್ಙಮಂವಿಜಯಯಾತ್ರಾರಂಭಮಂಮಾಣ್ಪಮೆ । ಲ್ಲಗೆಯಿಂದೋಪಳನೊಲ್ದುತಾಂನುಡಿಸುತುಂಲೀಲೋತ್ಸವಂದಾಳ್ದಿದಂ ॥ ೭೫ ॥ ಆಗಳ್ ; ವೃ॥ ಕಾಮಂಗೆಲ್ಗೆಮಹೋತ್ಸವಂಮಿಗೆಮನೋಜಂಗಕ್ಕೆ ನಲ್ವೆಂಡಿರು । ತ್ಕಾಮಂದಾಳ್ಗೆರತೀಶ್ವರಂಗೆರತಿತಾಂಕೂಡಿರ್ಕೆಪಂಚಾಶುಗಂ ॥ ಸ್ತ್ರೀಮಂಬೊಂದುತೆಬಾಳ್ಗೆಕಾಮವಿರಹಂಚಂದ್ರಾನಿಲಾಬ್ಜಾಳಿಯೊಳ್ । ಪ್ರೇಮಂದಾಳ್ಗೆಮಎಂದುವಂದಿಶುಕಮೇಂತಾಂಡಂಗುರಂಬೊಯ್ದುದೋ ॥ ೭೬ ॥ ಇಂತುವಂದಸುರಭಿ ಸಮಯದೊಳೊಂದುದಿವಸಂ ; ವೃ॥ ನಿಡುಗಣ್ಣೀರಜಪತ್ರಮಂತೆಗಳೆನೇತ್ರೇಂದೀವರೇಂದಿಂದಿರಂ । ಪೊಡರ್ದಾಡಲ್ಮಿಗೆಮುಂಡವಕ್ತ್ರಮುರೆಚಂದ್ರಂಗಾಗಿಸಲ್ದೋಷಮಂ ॥ ಒಡನಾಗಳ್ಬರಿರಾಜಪುತ್ರಸಚಿವರ್ಗ್ಗಂಧಿವ್ರಜಂಪೊಂಗುತು । ಗ್ಗಡಿಸುತ್ತೊಪ್ಪಿರೆಮುಂದೆಸಂಭ್ರಮದೆತಾನೈತಂದನಾಸ್ಥಾನಮಂ ॥ ೭೭ ॥ ಅಂತುಚಂದ್ರಹಾಸ ಕುಮಾರಂ ನಿಜಜನಕಪದ ಸೇವೆಗೆಯ್ಯಲೆಂದು ; ವೃ॥ ಸುರುಚಿರರತ್ನತೋರಣಮನುದ್ಘವಿಚಿತ್ರಸುಚೇನರಮ್ಯಬಂ । ಧುರಪಟಮಂಸುಧಾಕರಶಿಲಾಗೃಹಮಂನವರತ್ನವೇದಿಕಾ ॥ ಕರಕನಕಾಂಚಿತಾಮಳಗೃಹಸ್ಫಟಕೂಟಮನತ್ಯುದಾರಭಾ । ಸುರಮಣಿಭಿತ್ತಿಯಂಕಳೆದುತಾಂನಡೆತಂದನವಂವಿಳಾಸದಿಂ ॥ ೭೮ ॥

ಕಂ॥ ಸಡಗಳದಿಂಪೊಡವಿಪಸುತ । ನೆಡೆಗಿಡಿದಿರಲರಸುವಕ್ಕಳೋಲಗವನೆಯುಂ ॥ ನಡೆತಂದುಪುಗಲದೊರ್ಕ್ಮೆಯು । ಪೊಡವಿಪಗಣಮಿದಿರನೆಳ್ದುದಾಗಳ್ಬರದಿಂ ॥ ೭೯ ॥

ವೃ॥ ಭರದಿಂದಲ್ಲಿದಿರೇಳ್ವರಾಜಗಣಮಂ ಕಣ್ಸನ್ನೆಯಿಂದೊತ್ತಿ ಸ। ತ್ವರದಿಂ ಸಂಮು
ಖಮಂ ಬವಂದಿಗಣಮಂ ಕೈಸನ್ನೆಯಿಂ ನೂಂಕಿ ಕಾ। ಲ್ಪುರುಷಂ ಪೇಳ್ದ ಕಡಂಗಿ ಮುಂ
ದೆವಡೆವಾಚಂಚತ್ಪ್ರತೀಹಾರಿಯಂ। ಕರದಿಂದಂ ಸೆಳೆದತ್ತ ನೂಂಕಿ ನಡೆತಂದಂ ಭಕ್ತಿ
ರತ್ನಾಕರಂ ॥ ೮೦ ॥ ಕಂ॥ ಮಣಿಪಱಿಳ ರಾಜಪುತ್ರರ। ಮಣಿಮಕುಟ
ದ ಕಾಂತಿ ತನ್ನ ಪದನಖಶಶಿಯಂ ॥ ಅಣಿಯರವೋಲಮುಪ್ಪುಡುಗಣ। ಗಣನೆಗೆ ವಂದು
ದು ಸಭಾನಭಸ್ಥಳದೆಡೆಯೊಳ್ ॥ ೮೧ ॥ ಅಂತು ಬರ್ಪಲ್ಲಿ ಮುಂದೆ;
ವೃ॥ ಸ್ಫುರದುದ್ಯದ್ರತ್ನಮಾಲಾಭರಣಕಿರಣಚಿತ್ರಾಂಬರಾನೀಕದಿಂ ಚಾ। ಮರಮಾ
ತ್ರಾಂದೋಳಿತ ಪ್ರಸ್ಫುರದಳಕದ ಮಂದಾರಹಾರೋರುಚಂಚ ॥ ದ್ವರತಾರಾಹಾರ
ದಿಂ ಕಣ್ಗೆಸೆದನನುಪಮಂ ಧಾರಿಣೀವಿಕ್ರಮಾಂಕಂ। ಪರರಾಜಾಖರ್ವಗರ್ವಚ್ಯುತಿಕನ
ಕಲಸತ್ಸಿಂಹಪೀಠೀನಿಷಣ್ಣಂ ॥ ೮೨ ॥ ಅಂತಿದಿರೊಳೆಸೆದಿರ್ಪ ನಿಜಜನಕನಂ
ದೂರದೊಳೆ ಕಂಡು ಪೊಡವಡಲೊಡನೆ; ವೃ॥ ಪಿರಿದುಂ ಸಂತೋಷದಿಂದಂ ಬರೆ
ಸೆಳೆದುರೆ ತಳ್ಕೈಸಿ ಬಾಕೆಂದ ಬಾಯುಂ। ದಿರದಾಗಳ್ತನ್ನ ಕೆಯ್ಯಿಂ ತೆಗೆದು ಪರಸಿ ರೋ
ಮೋದ್ಗಮಂ ಪೊಣ್ಮೆ ಕಣ್ಣೊ ॥ ಳ್ಸುರಿಯಲ್ ಹರ್ಷಾಶ್ರುವರ್ಧಾಸನಕೆ ತೆಗೆದು ಕೂ
ರ್ತಿರ್ಕೆ ತಾನೊಲ್ಲದಂತುಂ। ಭರದಿಂ ತಾತಾಂಘ್ರಿಪದ್ಮಾಸನದೊಳೊಸೆದು ಕುಳ್ಳಿರ್ದನಾ ರಾ
ಜಪುತ್ರಂ ॥ ೮೩ ॥ ಆಗಳ್; ವೃ॥ ಪದೆಪಿಂ ಪುತ್ರನ ವಕ್ತ್ರಚಂದ್ರನ
ನಮೇಯಾನಂದದಿಂ ನೋಡುತುಂ। ಮುದದಿಂ ನಲ್ನುಡಿಯಂ ಕರಂ ನುಡಿವುತುಂ ನೇರಿ
ಕ್ಕುತುಂ ಕೂಂದಲಂ ॥ ಪುದಿದಿರ್ದುತ್ಸವದಿಂದಲುಂಗಿಸುತೆ ಹಸ್ತಾಂಭೋಜದಿಂ ಗಂಡ
ಮಂ। ವಿದಿತಂ ಭೂಪಕುಳೇಂದನೊಲ್ದು ನುಡಿದಂ ಸಂತೋಷದಿಂ ಮಂತ್ರಿಯೊಳ್ ॥
॥ ೮೪ ॥ ಅದೆಂತೆನೆ; ವೃ॥ ವರಗುಣಿ ಕೇಳ್ವುದೈ ಮೊದಲೊಳು
ದ್ಘುಯುವಾಧಿಪಪಟ್ಟಮಧ್ಯದೊಳ್। ಸುರುಚಿರರಾಜ್ಯಪಟ್ಟತುದಿಯೊಳ್ಪರಮುಕ್ತಿ
ದಮುಪ್ಪಸತ್ತ್ವಪೋ ॥ ಭರವರರಾಜ್ಯಪಟ್ಟಮಿವು ಸಂದಪುವೆಮ್ಮಯ ಪೂರ್ವಭೂಪ
ರೊಳ್। ಮರೆದಿದನಾಂ ಕೆರಂಬಗೆಯದಿರ್ಪುದು ಕೀರ್ತಿಗೆ ಭಂಗಮಲ್ಲಮೋ ॥ ೮೫ ॥
ವೃ॥ ಗುರುತರದುಃಖಮಂ ತಳೆದು ಮಿತ್ರಕಳತ್ರಸುತಾದಿಬಂಧುಬಂ। ಧುರನರಬಂಧ
ಸಂಸರಣದೊಳ್ಮಿಗೆ ಸಿಲ್ಕಿ ಪರತ್ರಸೌಖ್ಯಮಂ ॥ ಮರೆದುರು ಕೋಪದಿಂ ದುರಿದು ಬಾಳ್ವನ
ಗೀ ಪರಿಬಾಳ್ವ ರೋಧಮಾ। ಗಿರೆ ತಿರೆಯಾಳ್ವಕಜ್ಜಮಿದು ತಾಂ ಬಿಡದಿರ್ಪುದು ಹಾಸ್ಯ
ಮಲ್ಲಮೋ ॥ ೮೬ ॥ ಅದರಿಂದೀಗಳ್; ವೃ॥ ಧರಣೀಭಾರಮನಾ
ನಲಾವ್ ಕ್ಷಮುಮನಾಂತಿರ್ದುಂ ಧರಾಸೌಖ್ಯಜ। ಝರ್ಝರಿತಾಂಗಂ ಮಿಗೆ ಮೋಹಿತಂ ನೃ
ಪವರಂ ಸಾಮ್ರಾಜ್ಯಮಂಗೆಯ್ದಪಂ ॥ ಜರೆಕುತ್ತಂ ಬಿಡದಿರ್ಕುಮಲ್ತೆ ನಿಜದಿಂದೆಂದಾ
ನು ಬಚ್ಚಾಯೆಯಿಂ। ಪಿರಿದುಂ ನಕ್ಕಪುದಲ್ತೆ ಮಂತ್ರಿಸುತ ಬಾಹಾಯುಗ್ಮ ವಿಾರೀತಿ
ಯಿಂ ॥ ೮೭ ॥ ಎಂದರಸಂ ನುಡಿಯೆ ಮಂತ್ರಿವರ್ಗಂ ನಿಂತೆಂದಂ;
ವೃ॥ ಧರಣೀಪಾಲಕ ಬಿನ್ನಪಂ ಸತತನಿಮಂ ಸಾಮ್ರಾಜ್ಯಮಾಳಲ್ ಕ್ಷಮಂ। ಧರಣೀಭಾ

ರಮನೆಲ್ಲಮಂ ತಳೆದು ತಾಂ ಸತ್ಯವ್ರತಂ ಪೂಣ್ದುಬಂ ॥ ಧುರಬಾಹಾಬಲದಿಂ ರಿಪುಕ್ಷ
ರಮನಿಕ್ಕುತ್ತೆಯ್ದೆ ಸದ್ಬಲಂದಮಂ । ಪಿರಿದುಂ ರಕ್ಷಿಸಿ ರಾಜ್ಯಮಂ ನೆಗಳ್ಚನೀ ಪುತ್ರಂ ಧ
ರಾವಲ್ಲಭಾ ॥ ೮೮ ॥ ಅದರಿಂ ನೀವಿಾಗಳ್; ಕಂ॥ ಕಟ್ಟುವುದು
ರಾಜ್ಯಪದವೀ । ಪಟ್ಟಮನೀ ಸುತಗೆ ಮುಂದೆ ರಿಪುನೃಪಚಯಕಂ ॥ ಕಟ್ಟುವುದುಚೆಂ
ಕಿಯೊಟ್ಟಿಲ । ನೆಟ್ಟನೆ ಕಟ್ಟುವುದುಮನದೆ ಹರಿಪದಯುಗಮಂ ॥ ॥ ೮೯ ॥
ಎಂದವಮಾತ್ಯ ನೊಡಂಬಡಂನುಡಿಂಪಿ ಸುತನದಂ ನಿಪಿಪಬಗೆಯಿಂ;
ವೃ॥ ಬಿಸಿಗದಿರಿಕರ್ಮವೀರಮಿಸುತಾಸುಳಿಬೀವರವಿಸ್ಮಯಂವಲಂ । ನಸುಗಳೆಪಿಕರ್ಮ
ಮೀವಮತಿ ಮುಹಾಶಶಿಬಿಂಬಮನೆಯ್ದಿಬಿಟ್ಟುದ ॥ ಲ್ಪಸುರಕುಮೀಲಸತ್ಕಳೆಮಹಾಧರಣೀ
ಕಳೆತಾತನಾಜ್ಞೆಯುಂ । ಪೊಸತೆನಿತೀರ್ಚೆತಾಮಪುಳಿಗುಮೀಕನೆಯಂತರಲಾಂಸವ
ರ್ಧನೀ ॥ ೯೦ ॥ ಇಂತೆಂತು ಪೊಪ್ಪದಕುವರನನರಸನೆಂತುವೊಡಂಬಡಿಸಿ,
ಕಂ॥ ಗುರುವಚನಕ್ಕೆದೆ ಗೂಂದಂ । ತರುಣಂ ಪ್ರನರುಚ್ಚಿಯಾಗದೆಂದಾವಿಮಲಂ ॥
ಗುರುವಚನಭಕ್ತಿಬಿಂವಂ । ಗುರುವಚನಮಲಂಘನೀಯಮೆಂಬ ಪ್ರೀತಿಯಿಂ ॥ ೯೧ ॥
ಆಗಳ್ ಮಹೋತ್ಸವಕರ್ಮಾರ್ತ ಸುಮುಹೂರ್ತದೆ, ಳ್, ವೃ॥ ಪರರಾಜ
ದೃಷ್ಟಸರ್ವೌಷಧಿದಳಫಲಸಂಮಿಶ್ರರತ್ನಾಕರಶ್ರೀ । ಕರಿಂಕಿತೀರ್ಥಪಾಳಿಪಗಾನಿರ್ಮಲ
ಜಲವಿಲಸಚ್ಚಂದ್ರಕಾಂತೋಪಲಿತೋದ್ಯ ॥ ದ್ಬುರಚಂಚತ್ಕುಂಬಮಂ ತಾಂ ಪೆಗಪಿಸು
ಖಜಲಂತರ್ಕ್ಕುಪುತ್ರಂಗೆರಂಬೇ । ಶ್ವರನಾಗಳ್ಯೌವರಾಜ್ಯಾಭಿಷವನೆಸಗಿದಂ ಪ್ರೀತಿ
ಯಿಂ ಸಾರ್ವಭೌಮಂ ॥ ೯೨ ॥ ವೃ॥ ಪಡಪಿಂದಂ ನೃಪನಾಗಳತ್ತಿವಿಮಲೋ
ದ್ಯದ್ರತ್ನಕಾಂತ್ಯುತ್ಕರಾ । ಸ್ಪದಹೇಮಸ್ಫುರದುತ್ಕಿರೀಟಮನವಂ ದಾನಂದದಿಂ ಹ
ಸ್ತದಿಂ ॥ ಸದಳಂಕಾರಕುಪುತ್ರಮೂರ್ಧ್ನಿ ಬೆಳಿಪಲ್ತೋದಿತ್ತು ಪೂರ್ವಾಚಲಾ ।
ಗ್ರದ ಭಾಸ್ವದ್ವರಬಾಲಸೂರ್ಯನವೊಲಾಚಂಚತ್ಕಿರೀಟಾಂಕುರಂ ॥ ॥ ೯೩ ॥
ವೃ॥ ಅರಿಭೂಪಗರ್ವತಿದುಃಖಮಿಂದರೆಗಮೋಯಾನಂದಮಾಭೂಮಿಗಾ । ಬಲಮಾ
ಪಂಡಿತಜಾಲಕ್ಕೆಸಿರಿಲುಬ್ಧಕ್ಕೆ ತೃಗ್ನೀಸಂತೋಷಮು ॥ ಬ್ಬರಮಾಗಳ್ಸಿರಿಪಳ್ಳಿವಾಂಗು
ಡಿಯುಡಲ್ಪಿಂದಮಾಷ ತ್ರನೊಳ್ । ದರಣೀಪಾಲಸತಾಕುಚಂದನೃಪನಾಗಳ್ಕಟ್ಟಿ
ದಂಪಟ್ಟಮಂ ॥ ೯೪ ॥ ಆಗಳ್, ವೃ॥ ತತಭೇರೀಕಹಳಾದಿವಾ
ದ್ಯರವಮೆತ್ತಂ ತೀವೆ ಭೂಮಿಾಸುರರ್ । ಶ್ರುತಿವಾಕ್ಯಂಗಳನಾಗಳಾಯ್ದು ಪರಸಲ್ಕಂ ಚಾ
ಕ್ಷಿಯರ್ಸೇಸೆಯಿ ॥ ಕ್ಕುತೆನೀರಾಜನಮಂ ಕರಂಬೆಳಗೆ ಸದ್ಬಲಂದಂ ವಲಂ ಘೋಷಿಸ
ಲ್ । ಕ್ಷಿತಿಪಾಲಂ ಶಶಿಹಾಸನರ್ಚಿಸಿದನಾ ಶ್ರೀಸಿಂಹಪೀಠಾಗ್ರಮಂ ॥ ೯೫ ॥
ಅಂತರ್ಚಿಸಿ; ವೃ॥ ಏರೆರಸಾವಧೂಟಿನಿಜಬಾಹುವಿನಗ್ರದೊಳೇರೆಸಂತಸಂ ।
ಭೂರಿಜನಕ್ಕೆ ಶತ್ರುದಿವಮಂ ನವಿದೇರೆಯುಶೋಗ್ಧಬೇಗನೀ ॥ ರೇರೆನಭಕ್ಕೆ ತೇಜಮಿರ
ದೇರೆರನೂವಧುವೇರೆವಕ್ಷದೊಳ್ । ಕೇರಿದನಾ ಕುಮಾರಶಶಿಹಾಸನೃಪಂ ವರಸಿಂಹಪೀಠ
ಮಂ ॥ ೯೬ ॥ ಅಂತೇರಿದಾಗಳ್; ವೃ॥ ಪಿರಿದುಂ ಭೂಪಾಲರ್ಲ್ಲರ್

ಸವಿನಯಮುರದಿಂಕಪ್ಪಮಂಕೊಂಡುಬಂದಾ । ದರದಿಂರನ್ನಂಗಳಂಸ್ಯಂದನಮುನವ
ಳವಮಾಣಿಕ್ಯಮಂಹಸ್ತಿಯಂತಂ ॥ ದರುಣೋದ್ಯದ್ರತ್ನಪಾದಾಸನದೊಳೊಲವಿನಿಂದಿ
ಟ್ಟುಕಂಬಿಟ್ಟುಮನಿತ್ತು । ಭರಣೋದ್ಯತ್ಕಾಂತಿಯಿಂದೋಲಗಿಸೆಚರಣಮಂರಾಜಿ
ಪಂಚಂದ್ರಹಾಸಂ ॥ ೯೭ ॥ ಅಂತು ರಾಜರಾಜಂ ರಾಜ್ಯಭಾರಮನಪ್ಪೈ
ಸಿದಿಂಬಳಿಯಂ ; ವೃ॥ ಹರಿಪಾದಾರ್ಚನೆಯಿಂದವೊರ್ಮೆಹರಿಲೀಲಾಸತ್ಕಥಾ
ಸಂಗದಿಂ । ದಿರದೊರ್ಮ್ಮೆರ್ಮೆಸುವೈಷ್ಣವಾಂಘ್ರಿಭಜನೋದ್ಯದ್ಧ್ಯಾನದಿಂದೊರ್ಮೆ
ಬಂ ॥ ಧುರಸುಕ್ಷೇತ್ರಸುತೀರ್ಥಸೇವನೆಯುನಂದೊರ್ಮ್ಮೆರ್ಮೆಸತ್ಸಂಗದಿಂ । ನರಪಾ
ಲಂಮಿಗೆಪೊಳ್ತನಿಂತುಕಳೆದಂಕರ್ದ್ದಗ್ಧಸಾರೋದಯಂ ॥ ೯೮ ॥ ವೃ॥ ಮದ
ಪಂಪೆಟ್ಟಿದುರಾಶೆಯಂಪರಿದುತೊಳ್ಪುನ್ಮತ್ತತಾಮೋಗ್ರಮಂ । ಸದೆದುದ್ಯದ್ವಪು
ರಾತ್ತಮೋಹಮನಮಂಷಡ್ವರ್ಗಮಂನುಗ್ಗಿಸಿ ॥ ಲ್ಕದರಾಗೇಂದ್ರಿಯಮಂಕರಂ
ಮುರಿದುಕಂದಂಕುಂದನಿಕ್ಕುತ್ತಿಸಂ । ಮುದದಿಂತಾಳ್ದಿದನಾನೃಪಂಹರಿಪದೋದ್ಯ
ದ್ಧ್ಯಾನಮಂಚಿತ್ತದೊಳ್ ॥ ೯೯ ॥ ಅಂತಾಕುಳಿಂದ ಭೂಪಾಲನಿರೆ ;
ವೃ॥ ವರಹಿಮಭೂಧ್ರಸೇತುಚರಮೋದಯಪರ್ವತಸೀಮೆಯಾಗೆಬಂ ।ಧುರಭರತತ್ರಿ
ಖಂಡಧರೆಯಂತವೆಗೆಲ್ಲಪುನಾಂಪಸೈಪ್ರಭಾ ॥ ಸುರಶಿರರತ್ನಮಾಗಿತಲೆಯೊಳ್ತೊಡರ್ದ
ತ್ತೆನೆಚಂದ್ರಹಾಸಭೂ । ವರನೊಸೆದುತ್ತರೋತ್ತರತೆಯಂತಳೆದಂಬಹುರಾಜ್ಯಭಾ
ರಮಂ ॥ ೧೦೦ ॥ ವೃ॥ ಬಲವದ್ವೈರಿವಿತಾನಮಂವಿಬುಧಸಂದೋಹಂಗ
ಳಂಚಂದ್ರಹಾ । ಸಲಸದ್ಭೂಪನಮೋಘಶಾತರಣದಿಂದಂದಾನದಿಂಜೆಚ್ಚರಂ ॥ ತಲೆ
ವಾಗಲ್ಸಲಿದೂಗಲಿಕ್ಕಿತವೆಯುತ್ತಂತಾಳ್ದನತ್ಯೂರ್ಜಿತಂ । ವಿಲಸತ್ಕುಂದಸುಚಂದ್ರಿ
ಕಾರುಚಿಯಶಃಸ್ವಭಾಗ್ಯಮಾಂಗಲ್ಯಮಂ ॥೧೦೧॥ ಅಂತುಮಲ್ಲದೆಯುಂ;
ವೃ॥ ನರಪತಿಚಂದ್ರಹಾಸನಸುಹೃತ್ಸತಿಯುರ್ತ್ತುವಿಪಾಣಿಪದ್ಮದೊಳ್ । ವರತಿಲಕಂ
ಗಳಂರಚಿಸಿನೇತ್ರದೊಳೊಯ್ಯನೆಕಂಕಣಂಗಳಂ ॥ ವಿರಚಿಸುತಂಗದಂಕರದಕಂಕಣ
ದೊಳ್ವರಕಾಂಚಿರತ್ನಬಂ । ಧುರಪದನೂಪುರಂಗಳೊಳೆಪಲ್ಲಟಮೊಪ್ಪಿರೆಕಣ್ಗೆತೋ
ರಿದರ್ ॥ ೧೦೨ ॥ ವೃ॥ ಧರಣಿಶ್ರೀಪತಿಮರ್ತ್ಯರೀಪ್ಸಿತಮನೊಲ್ದೀವೃತ್ತಿ
ರಲ್ಕೋಡಿನಾ । ಚ್ಚರದಾನಾಕಕುಜಂಕಡಂಗಿಮರವಟ್ಟಿತ್ತಲ್ಲದಾದೇವಗೋ ॥ ವುರೆ
ಬಾಲಂಮುದುರಿತ್ತುಮರ್ತ್ಯಮಣಿತಾಂಕಲ್ಲಾಗಿಪೋದತ್ತುಚಾ । ರುರಸಾವಲ್ಲಭಚಂ
ದ್ರಹಾಸಪೃಥಿವೀಕಾಂತಂಗಮೇಂಸಾಟಿಯೇ ॥ ೧೦೩ ॥ ಮತ್ತಂ ;
ವೃ॥ ಧರಣಿಪಚಂದ್ರಹಾಸನಗುಣಂಗಳನೆಲ್ಲಮನೊಲ್ದುಕಿನ್ನರರ್ । ಹರಿಸದೆಪಾಡಕೇ
ಳ್ದುಸುರಪಂತವೆನೇತ್ರಚಯಂಗಳೆಲ್ಲಮಾ ॥ ವರನೃಪಗೀತಮಾಲಿಪಕೊಡಂಕೆಗಳ
ಪ್ಪತೆರಂವಿಧಾತ್ರನೀ । ಪರಿನೆಗಳಂದಲೇತಕೆನುತುಂತಲೆದೂಗುವನಲ್ಲಿಚಿಂತೆಯಿಂ ॥
॥ ೧೦೪ ॥ ವೃ॥ ಧರಣಿಪಚಂದ್ರಹಾಸನೃಪಖಡ್ಗದಧಾರೆಯೊಳೆಯ್ದೆನಿಂದು
ತಾಂ । ಸಿರಿಸತಿನೀರಮಾನಿಸೆಯೆನಿಪ್ಪಭಿದಾನಮನಾಂತಳಲ್ಲದೀ ॥ ಧರಣಿನರಾಧಿಪಾ

ಮಳಭುಜಾಶ್ರಯದೊಳ್ತವೆನಿಂದುಪೆತ್ತಳೀ । ತಿರೆಪೆಸರಂಕಡಂಗಿಪಡೆದಳ್ಕೊಗದೊಳ್ಗರೆನಿಂದುಭಾಷೆಯಂ ॥ ೧೦೫ ॥ ವೃ॥ ಧುರದೊಳ್ಭೂಮಿಪಶಾತಖಡ್ಗಸತಿಚಂಚಲ್ಲೀಲೆಯಿಂಬಾಗುತುಂ। ಪಿರಿದುಂಚಿತ್ರಚಮತ್ಕೃತಿಪ್ರಚುರಭಾಭಾಸ್ವತ್ಕಟಾಕ್ಷಂಗಳಿಂ ॥ ನೆರೆನೋಡುತ್ತುರೆಕೀರ್ತಿಕಾಂತೆವಿಜಯಶ್ರೀಕಾಂತೆಯೊಳ್ಪ್ರೇಮದಿಂ। ತಿರಿಕಲ್ಲಂನೆಗಳ್ದಾಡುವಳ್ರಿಪುಮಹಾಶೀರ್ಷಂಗಳೊಳಾಗ್ರದಿಂ ॥ ೧೦೬ ॥ ಮತ್ತಮದಲ್ಲದೆಯುಂ ; ವೃ॥ ಎಡೆಗುಡದೋಡಿಸಿತ್ತುನಡುಗಾಡಿಗೆದಾವವಾನೇಡಿಸುತ್ತೆಬೆಂ । ಜಡಧಿತಗುಳ್ದುದಂಬುದಿಗೆಬಾಡಬಮಂಕಡುಚೆಚ್ಚರೋಡಿಬೆಂ ॥ ಗಡೆಬಿಡದೋಡಿಸಿತ್ತಿನನಪುಚ್ಚಿಮನೀರಧಿಗಾಹಪೇಳ್ವೆನೇಂ । ಪೊಡವಿಪಚಂದ್ರಹಾಸನೃಪನೋಜಗದೇದೊರೆಯಾಪ್ರಪಂಚದೊಳ್ ॥ ೧೦೭ ॥ ವೃ॥ ಅರಿಶಿರಮಾಲೆಯಾಂತುರಿಪುಕೃತ್ತಿದುಕೂಲಮನುಟ್ಟುಶತ್ರುಬಂ । ಧುರತನುಮಾಂತರಕ್ತಪರಿಸೇಚನದಿಂತಿಮಿರ್ದಂಗರಾಗಮಂ ॥ ನೆರೆಪಳೆನಿಂದಮಿತ್ರಹೃದಯಾಂಬುಜಪೀಠದೆರಾಗದಿಂಜಯಶ್ರೀ । ಶ್ವರನೊಳೆಭೂಪಖಡ್ಗವಧುತಾಂನೆರೆದಳ್ಪಡದಳ್ಸುಕೀರ್ತಿಯಂ ॥ ॥ ೧೦೮ ॥ ಅದುಮಲ್ಲದೆಯುಂ ; ವೃ॥ ಪೊಡವಿಪಚಂದ್ರಹಾಸರಿಪುಮಾನಿನಿಯುರ್ವನದೊಳೆತ್ತಳಲ್ದುಕೂ । ಗಿಡೆಶುಕಮೆಯ್ದುಮುತ್ತೆಬೆದರ್ದೆತ್ತೆಕರಂಗಳನಲ್ಲಿಕೋಕಿಲಂ ॥ ಬಿಡೆತಳಿರೆಂದುತಾಂಕುಟುಕೆಬೆರ್ಚುತೆಸಿಟ್ಟುಸೆಭೃಂಗಮೆಲ್ಲಮುಂ । ಬಿಡವಡರ್ದೆತ್ತೆಸುತ್ತೆಸುಗಿದತೋರ್ಕಳಲ್ದುಪೋರ್ಕರಳ್ದುಮೊರ್ಗುಳ್ಚಿದರ್ ॥ ೧೦೯ ॥ ವೃ॥ ಧರಣಿಪಚಂದ್ರಹಾಸನೃಪನುದ್ಧುಗುಣಾಕರನಾತ್ತಪಾನಬಂ । ಧುರಕರನೆಂದುಯಾಚಿಪನೆವಂವಿಬುಧರ್ತ್ತಮಿದೂರದೇಶದಿಂ ॥ ಬರಮೆತೆರಳ್ದುಬರ್ಪಪಥದೊಳ್ನೆರೆಪಾಳ್ಗೆಡೆದಿರ್ದಶತ್ರುಮಂ । ದಿರದೊಳೆಕಂಡುರತ್ನಕುಲಮಂಧನಮಂಮಿಗೆತೃಪ್ತಿಯಾಂತಪರ್ ॥ ೧೧೦ ॥ ವೃ॥ ಅರಿಕಾಂತಾಶಿರಮುಕ್ತಹಾರವರತಾರಾಜಾಲಮಂ ತೋರಿಸಿ । ತ್ತರಿಚಂಚತ್ತನುಸೂರ್ಯಕಾಂತಶಿಲೆಯೊಳಾತ್ತಪಾಗ್ನಿಯಂಪೆರ್ಚಿಸಿ ॥ ತ್ತರಿಸಾಮಂತನರೇಶರಾಕುಮುದಮಂಬಾಡುಂದಿಸಿತ್ತಿಂತುತಾಂ । ನರಪಾಲಾಗ್ರಣಿಸುಪ್ರತಾಪದಿನಪಂಪೆರ್ಚಿತ್ತುಭೂಲೋಕದೊಳ್ ॥ ೧೧೧ ॥ ವೃ॥ ಧರಣಿಪಭೀಷಣಸ್ಫುಟಲಸತ್ತನುವಂಮಿಗೆಕಂಡುಸುಪ್ತಿಯೊ । ಳ್ಕರಿಗರಿಗಂದಿಬೆಂದುಭಯದಿಂದುರೆಸತ್ತುರೆಸುತ್ತಿದುಃಖದಿಂ ॥ ವ-ರುಗಿಪ್ರೋರ್ಲ್ದಳಲ್ದುತವೆಕಾಡಿರಡೆಯ್ದಿದಶತ್ರುರಾಜರಾ । ವರಹೃದಯಾಂತರಾಳದೊಳಗಿರ್ದ್ದವಿಳಾರಮಣಂಮನೋಹರಂ ॥ ೧೧೨ ॥ ವೃ॥ ದಾನದಿನೊಪ್ಪಿತೋರ್ಪ್ಪಕರಮಲ್ಲದೆಯುಂಸ್ವವಶಾನುವರ್ತಿತಾ । ಮಾನಸಮೊಪ್ಪೆಭದ್ರಗುಣರಂಜಿತನಭ್ಯುದಯೋದ್ಧುದೀರ್ಘಸಂ ॥ ಮಾನಿತಹಸ್ತಪುಷ್ಕರನಮೋಘುಸುವಂಶಭವಂಮನೋಹರಂ । ತಾನೆನೆಸಾರ್ವಭೌಮವೆಸರಂಶಶಿಹಾಸನರೇಶನಾಂತಪಂ ॥ ೧೧೩ ॥ ವೃ॥ ಧುರದೊಳ್ಮೆಯ್ಗಲಿಭೀಮನಂತೆಜಸದೊಳಾಶ್ರಾಶಶಾಂಕಂಬೊಲ್ಕೈ । ಸಿರಿಯೊಳ್ಮಾಧವನಂತೆಚಾಗದೊಳೆರಾಧೇಯಂಬೊಲೌಜ್ವಲ್ಯ

ದೊಳ್ ॥ ಸ್ಮರನಂತುದ್ಘವಿದಗ್ಧತಾವಿಭವದೊಳ್ವಾಣೀಶನಂತೊಪ್ಪಿದು । ಸ್ಥಿರಸ
ತ್ರೂತ್ಕರಮರ್ಮಭೇದಿಯೆಸೆದಂಶ್ರೀಚಂದ್ರಹಾಸಾಧಿಪಂ ॥ ೧೧೪ ॥ ವೃ॥ ಶ್ರುತ
ಮುಂಸೌಶೀಲ್ಯಮುಂವಿಕ್ರಮಮುಮಮಳಚಾರಿತ್ರಮುಂದಾನಮುಂಸ । ನ್ಮತಿಯುಂ
ಸೌಭಾಗ್ಯಮುಂಸತ್ಯಪಚತುರತೆಯುಂಧರ್ಮಮುಂಭೋಗಮುಂಸಾ ॥ ಯಾಶಿಯುಂ
ಸನ್ಮಾನಮುಂಸಂಪದದನೆರವಿಯುಂಕೂಡಿತನ್ನೊಳ್ಪಿತಾಂತಂ । ತತಕೀರ್ತಿಶ್ರೀಯು
ಮಂಬತ್ತರಿಸೆಮೆರೆದನಾಭಾರತೀಭಾಳನೇತ್ರಂ ॥ ೧೧೫ ॥ ಮತ್ತಮಾ ರಾಜ
ಪುತ್ರನ ಖಂಡರಿಪುಮಂಡಲಾಧಿಪ ದೋರ್ದಂಡ ಚಂಡತರ ಕೋದಂಡ ಕಾಂಡಖಂ
ಡನಮಂಡಿತಶಲ್ಯಪಿಂಡತಾಂಡ ವಾಲಂಕರಣ ರಣಮಂಡಲನುಂ, ತಾರಹೀರಹಾರ
ದಾಂಭೋಧರ ಕ್ಷೀರಮಂದಾರ ಮಳೆಯುಜ ಪಟೀರಸೀರಿಮರಾಳ ಸ್ಮೇರಶಾರದಾ
ಡಿಂಡೀರ ಪಿಂಡಪಾಂಡುರಾ ಖಂಡವಿಮಳಯಶಶ್ಚಂದ್ರಿಕಾ ಖಿಲಾಶಾಸೀಮಂತಿನೀ
ಕುಚಕಮಳ ಕುಟ್ಮಳಾಯಮಾನನುಂ; ಷಡಲಿಪ್ರಭ ವಿರಾಗಾತಿವ್ಯಸನ ಕ್ಷೀಣಧ
ನಜನಾಭಿತಾಪಭಯ ವ್ಯಯಗುರುವಿರಹಾ ಚಿಂತಾಂತರಂಗಿಣೀ ಪೂರಪೂರಿತ ನಿಖಿಲ
ರಿಪುಮಾನಸನುಂ; ಪರಿಚರಣ ಕನಕಕಂಜಾತ ಪರಿಪಿಂಜರ ಮಂಜ ಮರಂದಸಾರ
ಕಸ್ತೂರಿಕಾಲಲಾಮ ಲಲಾಟತಟನುಂ, ನಿಖಿಲ ಕಲಾವಿಲಾಸ ವಿನಯನಯ ಸಂ
ಪತ್ಸಮೃದ್ಧಿ ಗುಣಾಭಿನಂದ್ಯ ವಿಮಳಮುಖ ಮಂಡಲನುಂ; ಅಮಂದಮಂದರ ಗಿರಿ
ಮಥ್ಯಮಾನ ಕ್ಷೀರಪಾರಾವಾರ ರಿಂಗತ್ತರಂಗ ಪರಂಪರಾನ ವದ್ಯಾಕೃದ್ಯತರೋದ್ಯ
ದ್ವಿದ್ಯಾನಿದಾನನುಂ; ಬುಧಜನಸಂಕಲ್ಪ ಕಲ್ಪನಾಕಲ್ಪ ಕನಕಧಾರಾಧರ ಕಸಿತಸುರ
ಭುಜನುಂ, ವಿನಮಿತಾಖಿಲಾವನೀಶನ ನಿವಹಮಸ್ತಕಪ್ರಶಸ್ತ ಕಸ್ತೂರಿಕಾತಿಲ
ಕಾಂಚಿತ ಶ್ರೀನುಂ; ಅಮಂದಸೌಂದರ್ಯ ಸಂದೋಹ ವಿಡಂಬಿತ ಸಮುದಸಮ
ಸ್ತಸೀಮಂತಿನೀ ಕಾಮಾಗ್ನಿ ದೀಪ್ತ ಕುಚತಟಲೇಪ ಕಾಶ್ಮೀರವಿಲೇಪನಾದ್ರ ಮೌ
ಕ್ತಿಕಾವಳೀಶಲ್ಯ ಸ್ಫುಟಸ್ಫುಟಾಯಮಾನ ಸ್ಫುರಣನುಂ; ವಿನಮಿತಸಮಸ್ತ ಸಾಮಂ
ತಮುಕುಟಕಾಂತಕಾಂತಾ ಸೀಮಂತರತ್ನಕಾಂತಿ ಸಂತಾನದಂತುರಿತ ಪಾದಪೀಠಾಂ
ತನುಂ, ಪರಿಶರಣ ಚರಣಭಕ್ತಿಪ್ರದೀಪ ಸಂಪತ್ತಿಗುಣ ಸ್ನೇಹನುಂ; ನಿಖಿಲವಿ
ದ್ವಜ್ಜನಾಭಿವರ್ಣಿತ ವಿತೀರ್ಣವೈಭವ ರಾಜಯೋಗ ಸಾಮ್ರಾಜ್ಯ ಲಕ್ಷ್ಮೀವಿಲಾಸ
ಧುರಂಧರನುಂ; ಖಲಗಣಪೂರ್ಣ ನಿರ್ವಾಣಪ್ರವೀಣ ತಾದುರ್ವಾರ ಗರ್ವಾಲಂಕರ
ಣನು ಮೆನಿಸಿರಾರಾಜಿಸುತ್ತೆನಗಪ್ಪೆವದೆದು; ವೃ॥ ಕರುಣಾಶಾಲಿಹರಿಪ್ರಸಾ
ದಸಿಕಂಧೃಷ್ಟಾಪ್ರತಾಪಾಂಗಬಾ । ವರಣಂಚೈತ್ರರಿಪೂತ್ಕರಂಪರಮತಂತ್ರಂ
ಮಂತ್ರಶಕ್ತಿಸ್ಫುರ ॥ ತ್ಪರಿಶುದ್ಧನಿರಪಾಯವಿಶ್ವವಿನುತಂಗಾಂಭೀರ್ಯರತ್ನಾಕರಂ ।
ಪರಮಾನಂದಮುಮುಂನರೇಂದ್ರತನುಜಂತಾನೇಗ್ಗಿಯಂತಾಳ್ದಿದಂ ॥ ೧೧೬ ॥
ಕಂ॥ ಶಶಿಹಾಸನಜಾದಪಟಂ । ದೆಸೆದೀವಕಡಂಗಿಭೋಗಿಸನಮುತಂ ॥ ನಸಿನಪ
ಕಶೆಸ್ಪಿಮದಗ । ಪ್ರೊಸನ್ಮಂತ ನಿಸಂಜನುಷಮೆಸಗುಂ ॥ ೧೧೭ ॥

ವೃ॥ ಧರಣೀಪಚಂದ್ರಹಾಸಕರಖಡ್ಗನಿಖಂಡಿತವೈರಿಕುಂಭಿಬಿಂ | ಧುನವರಕ್ತಸಿಕ್ತ
ವರಮೌಕ್ತಿಕವೀಜದವೊಲ್ಪುಟ್ಟಿದುದ್ಯದುಡು ॥ ಸ್ಫುರದುರುವಲ್ಲಿಜೊನ್ನದೊಳದರ್ಗನಬಾಂ
ತದೆಸರ್ಬಿತಾರಕಾ | ಸುರುಚಿರಪುಷ್ಪಮಂಶಶಿಲಸತ್ಫಲಮಂಪಡೆಗುಂನಿಗರ್ಗಳಂ ॥
॥ ೧೧೮ ॥ ಕಂ॥ ದೆಸೆವಿಳ್ದತ್ತುಂಪಸರಿಸೆ | ಜಸದೆಸಕಂಚಂದ್ರಹಾಸಿಯಾ
ಗಸಮೊರೆಯೊಳ್ ॥ ಮಿಸುಗುವತಾರಗೆದತ್ತಿಯು | ನೊಸೆದಿಟ್ಟಂತೆಸೆದುದಮುಮಜನ
ಕಾನ್ಯಸನತ ॥ ೧೧೯ ॥ ವೃ॥ ಹರಿಪೀಠಾರೂಢನುದ್ಯತ್ಸಚಿವತತಿಸಮಾಸೇ
ವ್ಯಮಾನಂಪ್ರತಾಪ | ಸ್ಫುರದುಗ್ರಚ್ಛಂಡದಾವೋಜ್ವಲಚಕಿತಚರನ್ನಾಗಲೋ
ಕಾಂಧಕಾರಂ ॥ ಅರಿಪೃಥ್ವೀಪಾಲಮೌಳಿಪ್ರಚುರಮಣಿಗಣಾನೇತ್ರಾಕ್ರಾಂತಿನೀರಾಜಿ
ತಾಂಘ್ರಿ | ಸ್ಫುರದುದ್ಯಲ್ಲೀಲಾಗಣಾಬ್ಜಪ್ರಚುರಲಸಿತಹಾಸಂನೃಪಂಚಂದ್ರಹಾಸಂ॥
॥ ೧೨೦ ॥ ಇಂತೊಪ್ಪುತಿಂದುರ್ಹಾಸ ನೊಡೆಯೋಲಗಂ ಗೊಟ್ಟಿದಲ್ಲಿಗಳ್;
ವೃ॥ ನರೆನೀಲ್ಬಂದಿದ ದಾನಸದೊಳವ ಮವ ಹಾಸತ್ಕವೀಂದ್ರೋತ್ಕರಂಭೂ|
ವರವೃಂದಂಮಂತ್ರಿವಗ ಂವಿಬುಧನಿತತಿವಂದಿವ್ರಜಂವಾರವಧೂಕಾ ॥ ಶಿರಸಿಜ್ಞಾಶ್ರೀ
ನಿವಿಪ್ರಪ್ರಸರಮತುರೀನಾರೀಪ್ರತಾನಂಪರಾಬಂ | ಪುರವಾಗ್ಮಿಸ್ತೋಮಮುದ್ಯ
ದ್ಭಟತಪಮುದಯಂಪೀನಸೇಘಂಸಿತಾಂತಂ ॥ ೧೨೧ ॥ ವೃ॥ ಜಯಜಯ
ರಾವಮಂನೆಗಳ್ವವಂಗಳಗ್ಗಳಸಪ್ಪಪಾಗಧರ್ | ಭಯದೊಳಡುರ್ತನಿಂದಧರ
ಣೀಪತಿಗಳ್ಕಳಿದೇವ್ವಮೈಯರ್ ॥ ನಯಮದುಸ್ತ್ರೋಣ್ಯನತಿಸಂಪಸಿಸ್ಥಪಿಯುದ್ಘ
ತಿವೊಳ್ಪಕಬ್ಬಿಗರ್ | ನಯಸಿದಿಚಂದ್ರಹಾಸನ್ನನೋಲಗದೊಳ್ಕಗೆತೀರ್ದರೋ
ಬಿಸಿಂ ॥ ೧೨೨ ॥ ವೃ॥ ತೆರಳ್ಪವಾದ ವಿದರ್ಭನೀಂವೊಗದನೀಂಕೊಳ್ಳ
ಗ್ಯಹಾಕೇರಳ | ಶ್ವೇತಸೈತಿಸ್ತಬಿದುವಂಗಕಳಿಂಗಗೌರ್ಜ್ವೀಶನೀಂಕರ್ಣಾಟಯುಂ ॥
ಭರದಿಂದಂಕುಡುಕಾಂದ್ಯಬಾದುಕಡೆನಿಲ್ಲಿಸೆಬಾಳನೋಡಿತ್ತಗ | ಜರ್ಗರವಂದಬ್ಬರ
ದಿಂದಮುಂದುಜಡಿದಂದೌವಾರಿಕಂಸ್ಥಾನದೊಳ್ ॥ ೧೨೩ ॥ ಅದಲ್ಲದೆಯುಂ,
ವೃ॥ ಇದುಕಾಂಬೋಜಜನೇಶನಟ್ಟಿದಹಯಂಕರ್ಣಾಟದೇಶಾದಿಪಂ | ಪದೆಪಿಂದಂ
ಮಿಗೆಕೊಟ್ಟಹೇಮಮಕುಟಂಕಾಶ್ಮೀರರಾಜಂಮಹಾ ॥ ಮುದದಿಂದಿತ್ತಸುಗಂಧ
ಪಾತ್ರೆಪಿರಿದೀಮುಕ್ತಾವಳೀಭೂಷಣಂ | ವಿದಿತಂಕೇರಳದತ್ತಮೆಂದುಸಚಿವರ್ತಾ
ವ್ಪ್ರೇರಿಪರ್ಕಾಣ್ಕೆಯಂ ॥ ೧೨೪ ॥ ಆಗಳ್; ವೃ॥ ಮಿರುಗಲ್ವಹ
ದೊಳಾರಮೆತ್ತಮೆಸೆಯಲ್ಕನತ್ಯಾಂಶುಗಂಡೇಗಳ್ಗಳೊಳ್|ಮಿರುಗಲ್ತಾಂಶುತಿಪೂರಮಂ
ದುಕೆನೆಗಳ್ತಾಂಜೋಲೆಬಿಂಬಾಧರಂ ॥ ಪಿರಿದುಂಕೆಂಬೆಳಗಂಕರಂಸುಳಿಸೆತೋರಲ್ದಂ
ತಕಾಂತ್ಯುತ್ಕರಂ |ಮೆರೆಯಲ್ವಜ್ರಸುಕಂಕಣಂಮೊದನಾಭೂಪಂಲಸತ್ಪೀಠದೊಳ್॥
॥ ೧೨೫ ॥ ಕಂ॥ ದಿನಪನಪೆಂದೊಗರುಂಬಂ | ದ್ರನಬೆಳ್ಗದಿರುಂತೊಡ
ದ್ದಂನೊರೆಪಗಿರಿಯುಂ ॥ ಜನಪತಿತಾಂನೆಸೆಯಿಸಿದಂ | ಘನಕುಂಕುಮಚಂದನಾಂ
ಗರಾಗದೆನೆಸೆನಸ ॥ ೧೨೬ ॥ ಕಂ॥ ಅಹಮಹಮಿಕಾಭಿನತನೃಪ | ಮ

ಹದುದ್ಯತ್ಸ್ವರ್ಣಮಕುಟರೇಣುಸ್ಥಿತಿಯಿಂ ॥ ಪಹಿಸಿದುದುಪಾದಪದ್ಮಂ । ಬಹುಸು ಮನೋರೇಣುಸಂಘಮಂಸಬೆಗೊಳದೊಳ್ ॥ ೧೨೭ ॥ ಅಲ್ಲದೆಯುಂ ;

ವೃ ॥ ಅದುಸಭದಂತನಂತಮಣಿರಂಜಿತಮುದ್ಗಮದಂತೆಸದ್ರಸಂ । ಸುದತಿಯುಮಧ್ಯ ದಂತತುಳಕಾಮಗುಣಂರವಿಯಂತೆಭಾಸ್ಕರಂ ॥ ಮದನನಚಾಪದಂತೆಸುಮನೋಗಣ ಸಂಚಿತಮಾನೆಯಂತೆಸಂ । ಪದಯುತಭದ್ರಮೆಂದೆನಿಸಿತಾಸಭೆತನ್ನೃಪಸಾರ್ವಭೌ ಮನಾ ॥ ೧೨೮ ॥ ವೃ ॥ ಸುರುಚಿರಶಂಖಮುಂವಿಮಳಮೌಕ್ತಿಕಮಂತಳಿ ದುದ್ಘುಸಿಂಧುವಂ । ತಿರೆಪಿರಿದಂನವೋಡುಗಣಮಂತಳೆದಭ್ರಪಥಪ್ರದೇಶದಂ ॥ ತಿರೆ ವರರಾಜಹಂಸನನವೋಘಕವಿಪ್ರಸರಂಗಳಂಮನೋ । ಹರಮೆನೆತಾಳ್ದಿತಂಗೊ ಳದವೊಲ್ಮೆರೆಗುಂಸಬೆಕಾಂತಿಬಂಧುರಂ ॥ ೧೨೯ ॥ ಅದರೊಳ್ ;

ವೃ ॥ ಅರಿಕಾಂತಾಖಿನ್ನದೇಹಂಸಕಲಬುಧಜನಪ್ರಾಣಸಂದ್ಯತ್ಕ್ರಪಾಬಂ । ಧುರಚಿ ತ್ತಂನೀತಿಮಾರ್ಗಂಕ್ಷಪಿತರಿಪುಕುಳಾವರ್ಗನುದ್ವೀತಮೋಹಂ ॥ ವರತಾರಾಕ್ಷೀರಹೀ ರಸ್ಫೀತಶರದಯಶಸ್ಸಾರಧಾವಳ್ಯಲೋಕಂ । ಮೆರೆದಿರ್ದಂಸ್ವಪ್ರತಾಪಪ್ರಚುರಕಮ ಲಹಾಸಂಕರಂಚಂದ್ರಹಾಸಂ ॥ ೧೩೦ ॥ ವೃ ॥ ವನಿತಾವಕ್ತ್ರಾಂಬುಜಾತ ಪ್ರಸರದೊಳಬಲಾಹಾಸಫೇನಾಳಿಯೊಳ್ಸಂ । ಮನಕಾಂತಾಪಾಂಗರೋಜರ್ನವಬಿಸ ಕುಲದೊಳ್ಕಾಮಿನೀಕುಂತಳಪ್ರೋ ॥ ದ್ಘನಚಂಚಚ್ಚಂಚರೀಕಾಳಿಯೊಳಮಳವಧೂ ದೋಸ್ತರಂಗೌಘದೊಳ್ಳೆ । ಲ್ವೆಸಪೆಂಪಿಂದಿರ್ದನಾಸ್ನಾನದೊಳತುಳಸರಃಕಲ್ಪದೊ ಳ್ರಾಜಹಂಸಂ ॥ ೧೩೧ ॥ ಮಂದಾಕ್ರಾಂತವೃತ್ತಂ ॥ ಶ್ರೀಮತ್ಪ್ರಾಲೇಯ ಗಿರಿತನುಜಾಶಾರದಾವಂದ್ಯಪಾದೇ ।ಸೋಮಾಸ್ಯೇಸರ್ವಜಗಭರಣಪ್ರೇಮಿಸೀಲೋಕ ಮಾತೇ ॥ ಭೀಮಾಂಭೋಜಾತಸುತಮುಖದೇವಾಳಿಸಂಸೇವಿತೇಶ್ರೀ । ರಾಮಾಕಾಂ ತಪ್ರಿಯೆಪೊರೆಮಹಾಶ್ರೀಕರೋದ್ಧಾದ್ರಿಕಾಳೀ ॥ ॥ ೧೩೨ ॥

ಗದ್ಯಂ ॥ ಇದುಸಮಸ್ತಸುರಾಸುರಸ್ತೋಮವಿಸ್ತಾರಮಸ್ತಕನ್ಯಸ್ತಹಸ್ತಪುಟಗಭ ಸ್ತಿಪ್ರಶಸ್ತಫಾಲಫಲಕತಿಲಕಿತಕಸ್ತೂರಿಕಸಸ್ತೋಕವಿಸ್ತರಿತವಿಕ್ರಮಚಕ್ರಪಾಣಿಪಾದಪ ದ್ಮಪರಾಗಪಾಂಸುಪಟಲಪತಿತಾಕಲಿತಸುವರ್ಣರಚನಾವಿಶೇಷಚಂಚಚ್ಚಂಚರೀ ಕಾಯಮಾನ ; ಮಾರಮಣಚರಣಸರಸಿರುಹಕಿಂಜಲ್ಕಮಿಳಿತಸೌಭಾಗ್ಯಪ್ರತೀರ್ಥಾ ಸ್ವಾದನಮಹಿಮಾವಿಭೂತಕವಿತಾನಿಸರ್ಗಮಾನಸಶ್ರೀವೇಂಕಟರಾಯವಿರಚಿತಮ ಪ್ಪಚಂದ್ರಹಾಸಾಭ್ಯುದಯದೊಳಷ್ಟಮಾಶ್ವಾಸಂ.

ಸಂಪೂರ್ಣಂ

ನವಮಾಶ್ವಾಸಂ.

ಕಂ॥ ಶ್ರೀಮತ್ಕ್ಷೀರಾಬ್ಧಿಸುತಾ । ವಾಮಾಂಗಂ ದೇವದೇವನನಘನತಂದ್ರಂ ॥
ಭೀಮಸುಖನುತ್ಸುಕಸ್ಫೀತ । ನಾಮಯದುರಿತಾರಿಯೀಗೆಸೊಗಮಂಶ್ರೀಶಂ ॥ ೧ ॥
ವೃ॥ ಲಲನಾಪಾದಪ್ರವಾಳಾವಳಿಯೊಳಮಕಾಂತಾಮುಖಸ್ಮೇರಪದ್ಮಾ । ವಳಿಯೊ
ಳ್ಭ್ರಮಾಸುಗೀತೋದಿತಕಲಗಳನಾದ್ಯಾನದೊಳ್ಸಾಂಗರೀಕೋ ॥ ಮಳಬಾಹಾವಲ್ಲಿ
ಕಾಸಂತತಿಯೊಳತಳಿನರ್ಮಸುಕೇಶದ್ವಿರೇಫಾ । ವಳಿಯೊಳ್ತಾನಿರ್ದನಾಸ್ಯಾನಿಯೊಳ
ಮಳವನಸ್ಪರ್ಧಿಯೊಳ್ಪ್ರವಸಂತಂ ॥ ೨ ॥ ಅಂತು ಯುವರಾಜನೊಡನೋ
ಲಗಂ ಗೊಟ್ಟಿರಲೊಡಮಾ ಪ್ರಸ್ತಾವದೊಳ್ ; ವೃ ॥ ಪಟುನೇತ್ರಸ್ಯಾಗ್ರಹ
ಸ್ತಾಂಕನಕಪಟಶಿರೋವೇಷ್ಟನಂ ಶ್ಮಶ್ರುಕೂರ್ಚಂ । ರಟದುದ್ಯದ್ವೀಣಾಘಂಟಾಲಸಿ
ತಕನಕಕೋಪೀನಸಾಲಂಬಹಾರಂ॥ ಘಟಿತೋದ್ಯತ್ಕುಂಡಲಾಂಶುಪ್ರಕರಲಸಿತಗಂ
ಡಂಮಹಾಟೀಘೋಕಾಯು । ಸ್ಫುಟನೆಯ್ತಂದಂಪ್ರತೀಹಾರಕನವಾಕ್ಪಟುಶ್ಚಿತ್ರ
ತಂಪಾಸವಸ್ತ್ರಂ ॥ ೩ ॥ ಆತನಪೆರಗೆ, ಕಂ॥ ತಳಿರ್ಗಳ್ಕುಡಿಗಳ್ಪ
ಣ್ಗಳ್ । ವಿಕಸಿತಮುಕುಳಂಗಳನಾಳಸುಮಮಂಜರಿಗಳ್ ॥ ಕಳಿಕೆಕೊನರ್ಗಳ್ಪೆಳೆ
ಗಳ್ । ಪೊಳೆಯಲ್ಪಿಡಿದೆಯ್ದಿವಂದನೊರ್ವನವನಪಂ ॥ ೪ ॥ ಅಂತುಬಂದು,
ವೃ॥ ಸುರಯುಯಮಾಲೆಯುವಿಚಕಿಲಾಳಿಯುಸಂಬುಜಕುಟ್ಮಳಂಗಳಂ । ಸುರುಚಿರ
ಚಂಪಕಪ್ರಸುಮಮಂಕದಳೀಫಲಮಂತಳಿರ್ಗಳಂ ॥ ಬಿರಿದುರುದಾಡಿಮಾಮ್ರಫಲಿ
ನೀಫಲಮಂವರಮಾತುಲುಂಗಮಂ । ಕರಸರಸೀಜದಲ್ಲಿತಳೆದರ್ಪಿಸಿದಂವನಪಾಲನ
ಳ್ಕರಿಂ ॥ ೫ ॥ ವೃ॥ ಇವುಮಾಕಂದಲಸತ್ಪ್ರಸೂನಮಿವುಕಂಕೆಲ್ಲಿಪ್ರಸೂ
ನಂಗಳಿಂ । ಇವುಮಲ್ಲೀಸುಮಮಾಲೆಗಳ್ಬಕುಳಕಮಿವಾಸಂತಿಪುಷ್ಪಂಗಳಿಂ ॥ ಇವುಬಂ
ಧೂಕಸುಮಂಗಳಿಂತಿವಸನಪ್ರೋತ್ಫುಲ್ಲಪುಷ್ಪಂಗಳಿಂ । ಇವುಮಾಧೂಫಲಮೆಂದು
ತೋರ್ದನೊಲವಿಂಸಂತೋಷಮಪ್ಪನ್ನೆಗಂ ॥ ೬ ॥ ಅಂತು ತೋರ್ದು
ಸಂತಸಂಮಿಗೆ ವೃ ॥ ನೀರಸಮಾಗಿಪೋದಗಿಡುಗಳ್ತಳಿರಿಂದೆಕೊನರ್ತು
ವಾಮಹಾ । ಬೂರಜಮೆಲ್ಲಪುಷ್ಪಮಧುಮಿಶ್ರಿತಮಾದುದುಪೂತಮಲ್ಲಿಕಾ ॥ ಶ್ರೀರ
ಮಣೀಸುನರ್ತನಮೆತೋರ್ದುದುನಂದನಮಧ್ಯದಲ್ಲಿನೀ । ರೀರುಹಪುಷ್ಪಮೆಲ್ಲಮಲ
ರಲ್ಕೆಗೆಬಂದುದುಚೈತ್ರಮುರ್ವಿಯೊಳ್ ॥ ೭ ॥ ವೃ॥ ಶುಕಪಿಕಗೀತಮೇವಿವಿ
ಧವಾದ್ಯಮದಾಗಿರೆಪೂರ್ಣಕುಂಭಮೇ । ವಿಕಸಿತಪದ್ಮಮಾಗೆತಳಿರುಯ್ಯಲೆಯಾಗಿರ
ಸಾಲಪಲ್ಲವಂ ॥ ಪ್ರಕಟಿತಚಾಮರಸ್ತಬಕಮಾಗಿರೆಕಾಮನಚಂದ್ರಪುತ್ರಿಯಾ । ಸು
ಕರವಿವಾಹಮಾದಪುದುನಂದನದೊಳ್ಜನತಾಮಹೇಶ್ವರಾ ॥ ೮ ॥ ವೃ॥ ವನ
ವಧುಗೀಬಸಂತನಸುಖಾಗಮನಂಮಿಗೆಪೆರ್ಚೆಸಲ್ಕೆಸಂ । ಮನಮುದಯೌವನೋದ
ಯಮನಾಗಳರಂಜಿಸಿಪೂತುತೋರ್ಪಳಾ ॥ ವನವಧುವಳ್ಕರಿಂಕರಮೆನಿಮ್ಮಯಸಂ

ಗತಿಯಿಂದೆಳೆಯೋಗವಂ । ಜನಪತಿಪಾದ್ಯಪಾದ್ಯಬರುವೆಳ್ಗಲರಿಂದೆಸೆಳೆತ್ತ್ರ್ಯಬಾಗಿ
ದಳ್ ॥ ೯ ॥ ಅದರಿಂ ; ಕಂ॥ ಮಾನಂದನವರಲಕ್ಷ್ಮಿಗೆ । ಮಾ
ನಂದನತಾಪಬಾಧೆಯುಂತವಿಸಲ್ಕಾ ॥ ಶ್ರೀನಂದನಜಿತವನದೊಳ್ । ಶ್ರೀನಂದನ
ಬಂಧುಭೋಗಮಂತೆವೆಸಡೆಯ್ದಿ ॥ ೧೦ ॥ ಎಂದುನುಡಿಯೆ ರಾಜರಾಜನವ
ಧಾರಿಸಿ, ವೃ॥ ಇದುದಲ್ಸ್ಕಾತನಪುಲ್ತ್ಯಾನಂದನವಧೂಚೈತ್ರೋದ್ವಿವಾಹೋಲ್ಲಸ
ನ್ಮದಪುಂಸ್ಕೋಕಿಲಕಂಠಷಟ್ಪದಕಲಧ್ವಾನಂಮನೋರಂಜಿತಂ ॥ ಪುದಿದಿರ್ದ್ದತ್ತ
ಮಪುಷ್ಪಶಯ್ಯವೃದ ಚೂತಾಶೋಕತಪ್ತಲ್ಲವಂ । ಮದನಾತ್ಮ(ಮಮುಖಿಪ)ತಜ
ನವ ಮೋಘಾಕೀರ್ಣಗಂಧಾನಿಲಂ ॥ ೧೧ ॥ ವೃ॥ ಕಳೆಗಳಕರಬರ್ಧನಮ
ನೀಡಿರಿದಂಬ ಜಕೆಟ್ಮಲಂಗಳಂ । ಅಳಿಗಳ್ಬಾಲ್ಕಿಸೂಳಿವಿಡಿತುಂತಳಿಡೋರಣ
ಮಿತ್ತಿಕಟ್ಟಿದು ॥ ತೆತ್ತಲವಿಸೆ ಕೆತ್ತಲುಂಪವನನಿಂದುರುಮಂವಿಗೆಪಾಡಿಸುತ್ತಿದು ।
ಬಳತರಮಾಘುನಂದದೆದಚೈತ್ರನಬೀರವನಿಂದುನೋಡ್ಪರಾಂ ॥ ೧೨ ॥
ವೃ॥ ಸುರುಚಿರಕಾದಳೋರುಘಲಿಪಟ್ಪದಕಂತಳೆಮಲ್ಲಿಕಾಲತಾ । ಸ್ಫುರದುರುದೇ
ಹವಲ್ಲಿಪುಳಿನೋಜ್ಜ್ವಘನಾಂಚಿತೆಕುಂದದಂತೆಬಿಂ ॥ ದುರದಧುಯುಸವನಾಲಸೆವನೀಂ
ದಿರೆಕೋಕಿಲಗಾನದಿಂದಮೆ । ವಸ್ಮರತರಲೀಲೆಯಿಂಷ್ಟಿಸಿರಂಕೆದಪ್ಪಳಮೋಘ
ಮೋಹದಿಂ ॥ ೧೩ ॥ ಅದರಿಂ, ವೃ॥ ಪರಹಂಸಕ್ಕೆಳಸೆರ್ಗೆ
ಯಾನಮುಪಮುದ್ಯತ್ಕೋಕಿಲಕ್ಕಂದಸ । ತ್ವರದಿಂ ಸ್ರಗ್ಗೆಮರಾಳಿಬೀರರಾರಂ
ಪೂದೋಂಟದೊಳ್ಸಂತಸಂ ॥ ಮೆರೆಯಲ್ಕಾಂನಡಪಾಡುತಿಗ್ರಪದದೊಳ್ಕಿತ್ತ್ಕರ್ಣ
ಶೋಳ್ವಾಕ್ಯಮಂ । ಪಿರಿದೊಂದುತ್ಸವದಿಂದಮೇಳ್ವಪದದೊಳ್ಲೀಲಾವಿನೋದಂಗಳಿಂ॥
॥ ೧೪ ॥ ಎಂದರಸಂ ನಿಜಸಖಗೆ ನುಡಿದುನಿಯೋಗದ ಪರಿಚಾರಿಕೆಯು
ರಂನೋಡಿ, ಕಂ॥ ವನರಮೆನಿಮ್ಮಾನಂದದೊ । ಳನುನಯದಿಂಕೊಡಲೆಂದು
ಮಧುಯುತೆನಿಮ್ಮಂ ॥ ವಿನುತಪಿಕಸ್ವರದಿಂ ಭೋರಂ । ಕನೆ ರೆವಳ್ಮಂದಹಾಸಪದ್ಮಾ
ನನದಿಂ ॥ ೧೫ ॥ ಈಗಳ್ವಿಂ, ಕಂ॥ ಪವನಖಿಮುಕರಕರದಿಂ ।
ಸದಮಳಜೀವಮನತಿಂಬಿಪದ್ಮಾಕರದೊಳ್ ॥ ಪದೆಪಿಂಪದ್ಮಕರ್ಕರದಿಂ । ಮೊದವಿಸಿ
ಬಹುಭಂಗಜಾಲಮಂನಡೆಪಾಡಿಂ ॥ ೧೬ ॥ ವೃ॥ ತರಳ್ಕಟಾಕ್ಷದಚ್ಚರುಚಿ
ಕೆಚ್ಚಿಡಿಗೆಂಪುವನಾಂತರಾಳದೊಳ್ । ಪಿರಿದಮರ್ದಿತ್ತಮಾಗೆತಳಿರೊಳ್ಕಲಗಂತಿರೆವೆ
ಳ್ಮಲಗ್ಗಳಾ ॥ ಗುರೆತಳಿರಂತೆರಂಜಿಸೆವನಾವಳಿಯಿಂತುವಿರ್ಪದಮಾಗಲಿ । ಚ್ಚರಿ
ಯುರೆಸನ್ನಿಯೊಂದುಪೊಗಳ್ವಂತಿರೆಮಾಡಿರಿಮಾಡಿಪಾಡಿಂ ॥ ॥ ೧೭ ॥
ಕಂ॥ ಪದರುಚಿಯಿಂನಖರುಚಿಯಿಂ । ಪದೆಪಿಂತಳಿರ್ದಂತೆಪೂತುರಂಜಿಪಪರಿಯಿಂ ॥
ಮುದದಿಂಮಾಡಿಂಪಥಲತೆ । ಸದಮಳಕುಚಜಘನಭಾರಮಂಥರಗತಿಯಿಂ ॥ ೧೮ ॥
ಅದಲ್ಲದೆಯುಂ ; ಕಂ॥ ಒದೆದಡಿಯಿಂದಸುಗೆಯನೀ । ಮದರೊಳ್ಮಿಗೆಪಲ್ಲವಂ
ಗಳಂಪಡೆಯಿರಿಮು ॥ ಬ್ಬರದಿಂದುಗುಳ್ಬಕೆಳಮ । ನದರೊಳ್ಮಿಗೆಪುಷ್ಪಸಂಘಮಂ

ಮುಡಿಯಿರಿನೀಂ ॥ ೧೯ ॥ ವೃ॥ ಗಿಳಿಗೆವೃದ್ಧೋಕ್ತಿಯುಂಪರಮಹಂಸಿಗೆಯಾನಮುನುದ್ಧುಕೋಕಿಲಾ । ವಳಿಗೆಕಲಸ್ವರಂಗಳನಶೋಕರಕ್ಕರುಗಾಯನಂಗಳಿಂ ॥ ಸುಲಲಿತಮುಪ್ಪವೊಲ್ಕಲಿಕಲೋಸುಗಮೊಲ್ದುಮನೋಮುದಂನಿರಾ । ಕುಲಮಲರ್ವಾಂತೆನಂದನದೊಳಾಂನುಡಿವಂನಡೆವಂಕೆಡಂಗುವಂ ॥ ೨೦ ॥ ಎಂದುನುಡಿದಾಗಳೆ ನರೇಂದ್ರಂ ಪ್ರಸ್ಥಾನಭೇರಿಯಂ ಪೊಯ್ಸಲ್ವೇಳ್ದಾಗಳ್,

ವೃ ॥ ಸ್ಮರನೀಭೂತಳಮಂಕೆರಂಜಯಿಸಿದೆಂಮತ್ತೀಗಳಾಂನಾಕಮಂ । ಭರದಿಂಬ್ಬೆತ್ರನಸ್ಯುನಿರ್ಜಪದದೊಳ್‌ಗೆಲ್ಲಂಗೊಳಲ್ಬೆರ್ಕುವಿಂ ॥ ವರಸಾಕೇತ್ಯಜಯಾಭಿಧಾನಮದರಿಂದೆಂದುತ್ಕದಿಂದ್ರಭೇಕೆ । ಚ್ಚುಗುಬಾಣಾಹತಘೋರಘೋಷಮೆನೆತಾಂಪೆರ್ಚೆತ್ತುಭೇರೀರವಂ ॥ ೨೧ ॥ ಆಗಳ್, ವೃ॥ ಬಿಡುಜಡೆಬೆನ್ನೊಳಾಡೆನಿಡುಗಣ್ಗಳಧೀಂಕಿಡೆವಕ್ತ್ರಮಂಡಲಂ । ನವನಗೆಯಂಕೆರಂಪಡೆಯೆಪೀನಕುಚಂನಲಿದಾಡೆಮಧ್ಯಮು ॥ ಗ್ಗಡದಿಂದುತ್ತುರ್ಕಂಪಿಸೆಕದಕ್ಕದಿಸಲ್ವೊಡೆಕಾಂಚಿಕಂಕಣಂ । ಬಿಡೆಸಬುದಂಗಳಂಪಡೆಯೆಪೊಡೆರತಂಡಮೆಬಂದುದಿತ್ತಲುಂ ॥ ೨೨ ॥ ವೃ॥ ಸುರಿಪಲಿಕ್ಸಿಜನ್ಮಮನಂದುರಿಪಿತೆಗಸ್ಮಂಜಂಕೆರಂಸೂಸಿತೋ । ಳ್ಗಳಚೆಲ್ವಂಬುಜನಾಳಮಂಜಯಿಯಿಸೂಪಂಪದ್ಮಮಂನಂಕೆಕೋ ॥ ಪುಲಗಂಡಂಮುಕುರಂಗಳಂತೆಗಳೆಪುರ್ಬಂಗೋಲವಿಲ್ಲಂಕಳೆ । ಗ್ಬಿಳಿಪಲ್ಕೆಲ್ಲಿವಿನಕನ್ನೆಯರ್ಪಲಬರಾಗಳ್ವಂದರುತ್ಸಾಹದಿಂ ॥ ೨೩ ॥ ಕಂ॥ ಬಿಡೆಜಡಿಪನೊಲೆಯುಸ್ತೋರೆಯುಂ । ಬಡವಡುಮಿಗೆಬಳ್ಕೆ ಜೇಕಪಾಶೋಷ್ಪರದಿಂ ॥ ನಡುಗಲ್ಕಂರಂಕೊರ್ವಿದ । ಬಿಡುವೆಣ್ಗಳ್ಳಂಕಗಾರ್ತಿಯುಗ್ಗಡೆತಂದರ್ ॥ ೨೪ ॥ ಅವರಲ್ಲದೆಯುಂ, ವೃ॥ ಸಿರಿಯೊಸ್ಮೆಯ್ಯರಿಯೊಳ್ಕಡಂಗಿಮೆರೆದುಪ್ಪೀಪಾಲಪುತ್ರಾರ್ಗಳ । ತ್ಯುರದಿಂಮೋಳಿಸಿಮಾಳಿರತ್ನಗುಚಿಪೂಲ್ವಿಪ್ಪನೊಳ್ಸಂತೆಸಂ ॥ ಮೆರೆಯಲ್ಮಾನಸದಲ್ಲಿದೇಹಜಿತಕಾಮಶರ್ಣಂತಿಷ್ಯೆ ಶೇಷ್ಯದಿಂ । ತೆರಳ್ದೆರ್ಪ್ಪಂದನಕೇಳಿಗಾಗಳೆಲವಿಂದ್ರಿಲಾವಿನೋದಂಗಳಿಂ ॥ ೨೫ ॥ ವೃ॥ ನಗೆನಗೆಯುಳ್ಪಲದ್ಬಸುಮಮಂನಗೆಯಾನಮದೇಭಗಮನಂ । ನಗೆತುಟಿ ತೊಂಡೆಯಂನಗೆಕೊರಲ್ಗವಂಬುನಸಬ್ಜಪತ್ರಮಂ ॥ ನಗಿನಿಡುಗಣ್ಸಾಹುಪರಿಘಂನಗೆಶೇಷನಾಗರಾಜನಂ । ಮಿಗೆತೆರಳ್ದಂದುಬಂದುದಮನಗುತಂಮಧುಚಂದ್ರಕಾಮರಂ ॥ ೨೬ ॥ ಕಂ॥ ಪೇರರವಕ್ಕೆಳ್ಸುತ್ತಲ್ । ನೆಲಸಿರೆಕಾಕಾಸಭಗಪನೆಸಿಪಂಸುಭಗಂ ॥ ವಿಲಸಿತಪ್ರೋಡುಮಧ್ಯಾ । ನಸಿದ ಧಾವನಂತೆವೊಲ್ಗಣಾಂಗಣಂ ॥ ೨೭ ॥ ಕಂ॥ ವನಕೇಳಿಗೆಸ್ಕನಿತನೆ । ಜನದೊಡಗೂಡುತ್ತಿಳಿವರಂಪರವಿಭವಂ ॥ ಬಿನದದೆತೆರಲ್ಪ್ಪಜ್ಜನ । ಮನೂನನದ್ದುದರೆಂಪ್ರಾಸ್ತಪರಿಯೆಂತೋ ॥ ೨೮ ॥ ಆಗಳ್; ವೃ॥ ಕಿಸವೀಜಗಂನೃಪನವಕ್ತ್ರದೊಳಾಂಪರಿವಾರೆನೆಂದು । ತ್ವರದೊಳ್‌ಡುರ್ತುರ್ಕೊಗಿಳಹಾನಿಸಂನಿಜಮಂಪಬಣ್ಣಿಸಂ ॥ ಪುಕಿಪಿನೃಪಾಲಮುಖಮುಮಿಂದುದ

ಪಂದಚಂದ್ರನಂ । ತಿರಿಧವಳಾತಪತ್ರಮಿಭದಗ್ರದೆರಂಜಿಸೆಬಂದನಾನೃಪಂ ॥ ೧೯ ॥
ಆಗಳ್ಮುಂದೆ ; ಕಂ ॥ ಅಸಗಿಳಿಕೋಗಿಲೆನೃಪಕುಲ । ತಿಲಕನಕಿವಿಗಪರ್ದನಿ ತ್ತುಸಂತೈಸಿದುವಾ ॥ ಜಲರುಹಚೂತಾಶೋಕ । ಸ್ಥಲದೊಳ್ಮಿಗೆತಾರಮಧ್ಯಮಾಂ ದ್ರಸ್ವರದಿಂ ॥ ೨೦ ॥ ಮತ್ತಂ ; ವೃ॥ ವಿದಳತ್ಪುಷ್ಪದಳಾಣ್ಕೆ ಗೊಟ್ಟುನರಿನೀಕಿಂಜಲ್ಕಮಂಸೂಸಿಸಂ । ಮುದದಿಂತಂಗೊಳದಲ್ಲಿನೀಳ್ದತೆರೆಯಿಂದಂ ಪಾದ್ಯಮಿತ್ತಕ್ಷತಾ ॥ ಸ್ಪದಸತ್ಕೋರಕಬೃಂದಮಂಪರಪಿಭೃಂಗೀನಾದದಿಂಪ್ರೀತಿ. ಯಂ । ಪದೆಪಿಂದಂನುಡಿದಿಂತುಭೂಪಗಿದಿರ್ವಂದತ್ತಂದ.ಮಂದಾನಿಲಂ ॥ ೨೧ ॥
ಇಂತೆಸೆವ ನಂದನವನದೊಳ್ ರಾಜನಂದನಂ ಬರೆವರೆ, ವೃ ॥ ಕೆರಮೆಸೆದಿ ರ್ದುದಾನೃಪನಕರ್ಣ್ಣಿನಿಪಿಂಬಿನಮಂದುಪ್ರೂತಪಾ । ದರಿಗಳಗುಂಪುಪ್ರೂಗುಡಿಗಳಿಂಪೆರೆ ವಾನವಮಲ್ಲಿಕಾಚಯಂ ॥ ಪಿರಿದುಫಲಂಗಳಂತಳೆದತೆಂಗುಸುಪುಷ್ಪಮನಾಂತಚಂ ಪಕಂ । ಸುರಯಿಂಯಸಾಲಶೋಕನಿಕರಂಕದಳೀಫಲಮಾಮ್ರಕೋರಕಂ ॥ ೨೨ ॥
ಅವರೊಳೊಂದು ತಳಿರ್ತ ಬಾಲರಸಾಲಮಂ ಕಂಡಡಪದ ಕಳಸಪಾಲಿತಿ ;
ವೃ॥ ಫಲಮಂಪುಷ್ಪಚಯಂಗಳಂತಳಿರ್ಗಳಂಕೀರಕ್ಕೆಭೃಂಗಕ್ಕೆಕೋ । ಕಿಲವೃಂದ ಕ್ಕೆಕೆಡಂಗುತಿತ್ತುಪಲಸಂಚಾಂಪೇಯಮಂಮಂಜುಳಂ ॥ ಗಳನೀಗಳ್ತವೆಗೆಲ್ದುಬಾಗದಿ ನಿಳಾಕಲ್ಪಾವನೀಜಂಬೊಲು । ಜ್ವಳಿಮಾಗಿರ್ಪುದುಚೂತವಿಾವನದೊಳಿಂತಿಲ್ಲಿಲ್ಲಮನ್ಯ ದ್ರುಮಂ ॥ ೨೩ ॥ ಎಂಬವಳನುಡಿಯುಂ ಮನದೆಗೊಂಡು ಶಶಿವರ್ಮ್ಮಂ,
ವೃ॥ ಇದುಮಧುಭೂಮಿಪಾಲವರಕೋಶಮನಂಗನಸತ್ಸಭಾಸ್ಥಳಂ । ಇದುಶುಕವೃಂ ದಭೋಜನಗೃಹಂಮಧುಪಾವಳಿಪಾನಶಾಲೆಸಂ ॥ ಮುದಪಿಕಸಂಘಕಾಡುವಪೊಲಂ ಮಲಯಾನಿಲನಾನಿವೇಶನಂ । ಇದುನವಮಲ್ಲಿಕಾಶ್ರಯಮಿದೇಬನದೊಳ್ನಡೆನೋಡೆ ಮಾಮರಂ ॥ ೨೪ ॥ ಎಂಬುದುಮರಸ ಸದರ್ಕೆಮಚ್ಚಿ ; ಕಂ॥ ಎಲ ರಲೆಯಿಕೆರಮೆಬಾಗು । ತ್ತೆಳವಳ್ಳಿಯತೋಳ್ಗೊಳಪ್ಪಿಸುಮನೋರಾಗಂ ॥ ಬಳೆಯು ಲ್ಕದರಿಂದಾಮ್ರದೊ । ಳೊಲವಿಂದಂಬಾಳ್ವಳಲ್ತೆಮಲ್ಲಿಗೆವೆಣ್ಣಂ ॥ ೨೫ ॥
ಆಗಳೊಂದಶೋಕಮಂ ದಿಟ್ಟಿಸಿ ಚಂದ್ರಚೂಡಂ ; ಕಂ॥ ತಳಿರಂಕೀಳ್ಗಂ ಪಿಕಕುಳ । ಮಳಿಪಿಂಸುಮನಕ್ಕೆಳೀಮ.ಖಂತವೆಬೀಳ್ಗಂ ॥ ಲಲನೆಯರೊದೆಗುಂಮ ರಮಿದು । ಸಲೆನಲನರಿಯಲ್ಕಶೋಕಮೆಂತೋಚೋದ್ಯಂ ॥ ॥ ೨೬ ॥
ಆಮಾತಿಂಗರಸಂ ಪಡಿನುಡಿಗುಡುವನೆಂದು ಕುಮುದ್ವತಿ, ಕಂ॥ ಲಲನಾಪದಾ ಹತಿಗೊಲವಿಂ । ದಳವೇರುತ್ತಲರ್ದಶೋಕಭೂಜಂನಿಜದಿಂ ॥ ಫಲಹೀನತೆಗೆಡೆಯಾ ದುದು । ನೆಲದೊಳಮಾರ್ಗಂಸುಮಾರ್ಗದೊಳ್ವರ್ತಿಪುದೇಂ ॥ ೨೭ ॥
ಎನೆಚೆನ್ನಾದುದೆಂದರಸಂ ಮಚ್ಚುತ್ತಂ ಬರ್ಪಲ್ಲಿಮುಂದೆ ಕೋದಂತಿರಿರ್ಪ ಕೇದಗೆ ವೇಲಿಯಂನೋಡಿ ಚಿತ್ರಭೋಗಂ ; ಕಂ॥ ಮರ.ಳೊಡನಾಡಿದಕೆತೆದಿಂ । ಗೊರವಂಮಿಗೆಬೂಬಿಬಡಿಕನಪ್ಪುದರಿಂದಂ ॥ ಕೆರಮೆಸೆದಿರ್ಪ್ಪೀಕೇದಗೆ । ಯುರಲಂತ

ವೆನೊಂಕಿಬಿಟ್ಟನಾಗಲಿವೇಳ್ಕುಂ || ೩೮ || ಎನೆ ಮದನಸುಂದರಿ ;
ವೃ|| ಹರರಿಪುವೆಂದ ಬಯ್ದು ಪೊರನೊಂಕಿರದೆನ್ನ ನಡುರ್ತುಕೊರ್ತುವ | ತ್ತಿರದೆ ಕಡಂಗುತೆನ್ನುಪೊಲೆಶೋಭಿಪಕಾಮುನನೀಗರಾಗದಿಂ || ಪಿರಿದೊಳಕೊಂಡಳೆಂತು ವನಲಕ್ಷ್ಮಿಯೆನುತ್ತುರದಿಂಕೆನಲ್ದುಪ | ಲ್ಮೊರೆಗುಮಿದಲ್ತೆಕೇತಕಿಗಳಸ್ಮಧುಪೀತವು ದಾಳಿಗಾನದಿಂ || ೩೯ || ಎನಲವಳ ನುಡಿಗರಸಂಮೆಚ್ಚಿ ; ಕಂ|| ಬಿರ ಯಿಯುನುರದಿಂಸೀಳ | ಲ್ಕರಲಂಬಂಗಾಗದೆಂದುತವ್ಮನೂಳೊಲವಿಂ || ಸರಸಿಜನೀ ಗಳ್ಸೃಜಿಸಿದ | ಗರಗಸಮಾವಿಕಚವುಪ್ಪಕೇದಗೆಗರಿಗಳ್ || || ೪೦ ||
ಎಂದುನುಡಿದಲ್ಲಿಂ ಮುಂದೆನಡೆಯೆ ತುರುಗಿಮಲರ್ದೊಂದು ಚಂಪಕತರುವಂ ಕಂಡು ರಾಜಸೇನಂ ; ಕಂ|| ಮದನವನಯುನೋತ್ಸವದೊಳ್ | ಪದೆಪಿಂದಂವು ರ್ದುಗಟ್ಟಿರಚಿಸಿದಬಿರುಸಂ || ದಶಿವುಲರ್ವುಡಿಯಂಸೂಸಿಪ | ಸದಮಳಪುಷ್ಪಂಗ ಳಿಂದೆಸಂಪಗೆಮೆರೆಗುಂ || ೪೧ || ಎನಲದರ್ಕೆ ಕುಂಚದ ಮಂಜುವಾಣಿ , ಕಂ|| ಪಿರಿದುಂಚಂಪಕಕಳಿಗ | ತ್ಯುರದಿಂಪಗೆತನನುಬಳೆಯೆಧರ್ರಪೀತಳದೊಳ್ || ಸ್ಮರನಳಿನೀಶಿಂಜಿನಿಯೊಳ್ | ವರಚಂಪಕಪುಷ್ಪಬಾಣಮಂತುಡಸೆಂದುಂ || ೪೨ || ಎನೆಮೆಚ್ಚಿ ಭೂಚಕ್ರ ವಿದ್ಯಾಧರಂ , ವೃ|| ಹರನೊಳ್ಮಿಥ್ಯಮನಾಡಿಕಂ ಟಕಮನಾಂತೆಂತುಂವನಕ್ಷ್ಮಾಜದೊಳ್ | ಪೊರಗಾಗುತ್ತಿರಜಸ್ವಭಾವಮನೆತಾಳಪ್ದಿ ಕೇತಕೀಪುಷ್ಪದೊಳ್ | ಪಿರಿದುಂಸ್ನೇಹಿಪಕಶ್ಮಲಾಂಗಮಧುಪವ್ರಾತಂಗಳಂಸೋಂ ಕೆದಂ | ತಿರೆಚಾಂಪೇಯಸುಮಂಕೆರಂಪಗೆಯನಾಂತಿರ್ಕುಂದ್ವಿರೇಫಾಳಿಯೊಳ್ || || ೪೩ || ಎಂದು ನುಡಿದಲ್ಲಿಂದಂ ನಡೆಯೆ ತುರುಗಿಪೂತಕಿಂಶುಕ ವೃಕ್ಷಮಂ ಬಲಗುಪ್ತ ನಿಂತೆಂದಂ ; ಕಂ|| ಅರಲಂಬಂಬಿರಯಿಗಳೆರ್ದೆ | ಯಿರಿಯಲ್ಕೆಗೆ ಕಾಸಿಮಸೆದಕೂರಂಬುಗಳಂ || ತೆರದಿಂತೇರ್ಗಟ್ಟಿದನೆಂ | ಬಿರವಿಂಗೆಡೆಯಾದುವವು ಮಮುತ್ತಿದಮುಗುಳ್ಗಳ್ || ೪೪ || ಅದರ್ಕೆ ಹೇಮವತಿ ನಸುನಕ್ಕು ;
ಕಂ|| ವನವನಧಿಯುವಡಬಂಸಂ | ಜನಿಸಿದತೆರದಿಂದೆಮೆರೆವಕಿಂಶುಕತರುಕಾ || ಮಿನಿ ಯುರವುನದೊಳ್ಮಿನುಗುಂ | ಜನಿಸಿದಕೊಡರ್ಗುಡಿಗಳಂತೆಕಾಯ್ಪುಂಪೊಗೆದುಂ|| ೪೫ ||
ಎಂದುನುಡಿಯೆ ಮುಂದೊಂದುನನೆದೀವಿದ ಪಾಟಲೀದ್ರುಮಮಂ ಶಶಿವರ್ಮಂತೋರಿ; ವೃ|| ಪಳಯೆಲೆಸೀರೆಜಾರೆಭರದಿಂದನಿಲಂಮಿಗೆಬಂದುಕೂರ್ತುಬ | ಳ್ವೆಳಮುರದಿಂ ದಮುಪ್ಪುವನಳಿಪ್ರಕರಂತವೆಬಂದುಪುಷ್ಪಕೋ || ಮಳರದನಚ್ಛದಂಸವಿವುವಾವ್ರ ಕುಳಂಮಿಗೆಮೋಗೆಬಿಳ್ಪಸಂ | ಚಳಿಸುವುವಂತರಿಂದಿವಳ್ಗೆಸೋದರಿಯೆಂಬುದೆನನ್ನಿಲೋ ಕದೊಳ್ || ೪೬ || ಅದಕೆ ರಸಂ ನುಡಿದಪ್ಪನೆಂದು ಕಾಮಮೋಹಿನಿಗಳ್ಕನೆ ಬಳಿಯೊಳಿರ್ಪ ದಿಗ್ದಂತಿಯುಂತೋರಿ ; ಕಂ|| ಹಗರಿಪುಗೆಮುನ್ನಮರಲಿಂ | ಶರಮಂಮಿಗೆಕಾಣ್ಕೆಗೆಯ್ದುದೀತಂಬೆಲರೊಳ್ || ಪರಿಮಳಮನಿತ್ತುದೀವನ | ತರ್ಪ್ಪೊಳ್ಮನ್ನಲರ್ದುಬಂದುದೀಮಾಧವಿತಾಂ || ೪೭ || ಅದಕ್ಕೆ ಶಶಿವರ್ಮನ

ವಳಸುಡಿಗೆ ಪಡಿಯಾಗಿ ; ಕಂ॥ ಅಳಿಶುಕಕಳಗಂಠರವದಿಂ । ತಿಳಿಪುತ್ತೆಮುಳಿ
ಸಂಬಸಂತನಂಬಸಿರಿಯುಂ॥ ನಲವಿಂನೆರಪಿದಮಾಧವಿ । ಗಿಳಿಯೊಳ್ಮಧುಮಾತಿಂನಂಬ
ಪೆಸಱೇಂಕಿರಿದೇ ॥ ೪೮ ॥ ಎಂದುನುಡಿಯೆ ಚತುರಜನ ಚಕ್ರೇಶ್ವರಂಮ
ಚ್ಚಿಬರೆವರೆ ಮುಂದೊಂದುಮಾಕಂದ ಶಾಖಾಗ್ರದೊಳ್ ; ವೃ॥ ತನಿಪಣ್ಗಂ
ಮನಮಾಱಿನೋಡಿಭರದಿಂಗೆಯ್ತಂದುಪೊಂಗುತ್ತೆ ಭೀಂಗ । ಕ್ಕೆಚಂಚುಪುಟದಗ್ರ
ದಿಂದಿರಿದುಪ್ಪಿಂಗಿಜೊಲ್ಲಿಕೆಣ್ಚಿಪ್ಪಿಪೀ ॥ ದನುಮಿಂದೋಪಳನಳ್ಳಿಗೊರ್ಕೆಕಿಡಾಪ
ಕ್ಷಿತ್ತುಮೆಮ್ಮೆಬೆಚ್ಚೆಮೋ । ಳನದೊಲ್ಗಿಸುತದ್ಗ್ರಹಂಟ್ಟಗಳಬಿಟ್ಟಂದಿಂಗಿಡುಕೀರಂ
ಕರಂ ॥ ೪೯ ॥ ಅದನರಸಂ ನೋಡುತ್ತಿರ್ಪನ್ನೆಗಂ ಮದನವೀಣೆಯೆಂಬ
ಪರಿಚಾರಿಕೆ , ಕಂ॥ ವನಜಾರಿಸೋಲ್ದುಸೆರೆಯಿರೆ । ಬನಗತ್ತಲಿಂಪೊಳ್ಸ
ರೋವರಪ್ಪುಲದಿಂದಂ ॥ ಇನಿಯನನರಸಲ್ಪ್ಪರೆಗ । ಳನುನಿಂಬಂದಂತೆಯುಮಾಧಿಕಾ
ಸುಮಪುಸೆಗುಂ ॥ ೫೦ ॥ ಎಂದರಸನವನಮಂ ತೋರಿದಾಗಳು ಸನಿಯಮೊ
ಳ್ಪಿಂಬದ್ ಶಾಜ್ಞಾರವಂ ; ವೃ॥ ದಿವದೊಳ್ಪುಷ್ಪಿಸಿಯುರ್ಕೆಳೇಲತೆಯುಪ
ಣ್ಗಳ್ಳೊತ್ತಿಂಟದೊಳ್ಪದ್ಮಿನೀ । ಸುವಧೂಪ್ಳಂದಮುದಿರ್ಪವಾನಿಪರಸೋಂಕಲ್ಪ್ಪಿಗ
ದಿಂಮುತ್ತಮುಂ ॥ ದಿವನಾಥಂಕರಮಂಕರಂತೆಗೆದನೀಭೋಜಾತಸಂಶ್ಲಿಷ್ಟದಿಂ । ದಿನ
ಸಬ್ಸಾರಿಕೆಳಂಕಿಬಂದುಸೆರೆಯಾಂತಂಬೋದ್ಯಮೋನೌಕಬೀ ॥ ॥ ೫೧ ॥
ಎಂದುನುಡಿಯೆ ನರೇಶಂಕೇಳ್ದು ಸಂತೋಷದಿಂ ಸಬೆಯುಲೊಂದುಬ್ಬು ಮಾವಿನೊ
ಳ್ತರಗಿ ಕೂತಪೊಸಮಲ್ಲಿಗೆಯುಂ ನೋಡಿ , ವೃ॥ ಸ್ಮರಸಕೃಪೆರ್ತೆಂಡೋ
ಬನದಭೂತಿಯೊಸಲ್ಲರಸ್ಮೈಪೊಬ್ಬೈತ್ರಸಾ । ಪರಮಗುಣಂಗಳೋಪವನನೈಸಿರಿಯೋ
ವಿರಹೀಜನಾಳಿಯಾ ॥ ಮರುಳೆರ್ದೆಗುಂಡೊಷಟ್ಪದದಪ್ರಣ್ಯಾಮೊಕಾವನಶಕ್ತಿಬೀಜ
ಮೋ । ಪಿರಿದಿದುಕೂಪುಣಂಬುಗಣಿಯೆಂಪೊಸಮಲ್ಲಿಗೆತಾಳ್ದಿಮೊಗ್ಗೆಯೋ ॥ ೫೨ ॥
ಎಂದು ಭಾವಿಸುತಲ್ಲಿಂ ತಳರ್ದು ಬಂದುಮುಂದೆ ಕಂಗೊಳಿಪ ವಳಂತಮಂಟಪದ
ತೂಗುಂಮಂಚದೊಳ್ ಮೆಲ್ಲನೆಕುಳ್ಳಿರ್ದು ಮದನವೀಣೆಯೆಂಬ ಗಾಯಕಿಯಮೊಗ
ಮಂನೋಡಿದಾಗಳ್, ವೃ॥ ಪಿರಿದುಂವೀಣೆಯನೊತ್ತಿ ವಕ್ಷದೊಳಮೇಳಂಗೆಯ್ದುಪ
ದ್ರಕ್ತಿಯಿಂ । ಸ್ಫುರದುದ್ಯತ್ಕಳನಾದಮುಣ್ಮೆಮುಕುತೀತಂತ್ರೀಸುಕಂಠಸ್ವರಂ ॥ ಕರ
ಮೊಪ್ಪಲ್ಗಮುಕಾದಿತಾಯಲಯಮುಂಪಂಚಪ್ರಪಂಚಂಗಳುಂ । ನೆರೆಯಲ್ಪಾಜಿಸಿದ
ಳ್ಮನೋಹರಮೆನಲ್ಗೀತಂಲಸದ್ವೀಣೆಯುಂ ॥ ೫೩ ॥ ಅದನರಸಂ ಕೇಳು
ತ್ತಿರ್ದ ನಿತ್ತಲ್ ನಿತಂಬಿನೀಜನಂ ಪುಷ್ಪಾಪಚಯ ವಿನೋದಕ್ಕೆಂದು ಸಂದಣಿಸಿ ;
ವೃ॥ ಬಿದುಜಡೆಬಿನ್ನೊಳಾಡೆನಡುಬಳ್ಕೆವಳಿತ್ರಯಮುಣ್ಮೆ ಬಟ್ಟಪೊಂ । ಗೊಡಮೊ
ಲೆಪೊಣ್ಮೆತುಳ್ಕೆನಗೆಜೊನ್ನಮಮುದ್ರಿರೆನೇತ್ರಕಾಂತಿಬ ॥ ಲ್ಪಡಿಯೆನಿತಂಬದೇಶಮ
ಲರ್ದ್ದಕ್ಕಿಗಳೊಂದಿಕೆಡಂಗಿಪಾಱೆಸೊಂ ॥ ಪಿಡಿದಿರೆಯಾನಮೆಯ್ದುದುಕೂದಿರಿಯಲ್
ಪ್ರಮದಾಕದಂಬಕಂ ॥ ೫೪ ॥ ಕಂ॥ ಮುರಮುರದೊಳ್ಗಡುಗಿದಡೊಳ್ ।

ಸುರಯುಯುಪುಷ್ಪಗೆಯುಮಂಪಿನಸುಗೆಯುಪೊದರೊಳ್ || ಮರುಗದದವನದಮಡಿಯೊಳ್ | ನೆರೆನೆರೆದಾರೆಪರಿದುದರರೆಪೇಡಿರತಂಡಂ || ೫೫ || ಕಂ|| ಜಲಜದಳಸ್ಫಟಿಕೆಯುಚೆಂ | ದಳಿರಕರಂಡಕೆಮನುದ್ಘುಕೆದಳೀಪತ್ರ || ಪ್ರಲಸಿತಮಂಜೂಷಮನಾ | ಲಲನೆಯರೊಲವಿಂಕರಾಬ್ಜದೊಳಾಂತಳ್ವಾಗಳ್ || || ೫೬ || ಕಂ|| ಮಿಗೆನಗೆನಗೆಗಣ್ಮಲರಂ | ನಗೆತಳೆವಮಾಬೆಂದಳಿಗ್ಗಳಂನಗೆಕುರುಳ್ಗಳ್ || ನಗೆದಲೆವಭೃಂಗಚಯುಮಂ | ಬಗೆಮಿಗೆನಗುವಲ್ಲತಾಂಗಿಯರ್ವ್ವನಲತೆಯಂ ||೫೭|| ಅಲ್ಲಿಂಪೆಸೆ, ಕಂ|| ಕಡೆಗಣ್ಣಾದಿರುರ್ವ್ವರೆಪ | ಳ್ಪಿಡಿದಿಲತಾಂಚೂತಪಲ್ಲವಂಪಂಡೆಗಬಂ|| ಮದದಿಯುಕೈದಳದರುಣಮು| ದಡಸಲ್ಮೆಗೆತ್ತಿಳಿದುತಿಂದುತಿಂಬದಳೊರ್ವ್ವಳ್ || ೫೮ || ಕಂ,| ತಳಿರುಬೆಯಿಂಪೂಗುಟಿಗ | ಳ್ತಳಿರಾಗಲ್ಕಣ್ಣಕಾಂತಿಯುಂಬೆಂದಳಗರ್ಗಳ್ || ಮಾರಾಗಳ್ಲತಿದಿವಾ | ಲಲನೆಗೆಮರುಳ್ಮಾಡಿದತ್ತುಚೂತಂಬನವೊಳ್ || ೫೯ || ಮತ್ತಮೊಂದೆಡೆ, ಕಂ|| ಎಳವಳಿರನಲ್ಲಿತಿರಿಯ | ಲ್ಕಳನೇಕ್ಷಣೆತಾಂತಮಾಲಭೂಜಮನದರಲ್ || ಪೂಳ್ದಳ್ಕಮಿಸಿರಾತ್ರೀ | ಲಲನೆಯುಪ್ರೀಲ್ಪೂರ್ಣಚಂದ್ರನಂತಿರೆವಕ್ತ್ರಂ ||೬೦|| ಅದಲ್ಲದೆಯುಂ; ಕಂ|| ತರುಣತಮಾಲದತರುವಂ | ತರುಣಿಕರಂಪತ್ತಿಪುಷ್ಪಬೃಂದಮನಿಳೆಯೊಳ್|| ಸುರಿಯಲ್ಕನೀಟುವಗುಜೆತಾಂ | ಪುಂಗುಲ್ಕವಿಲೋಂದುಕುಂತೆದುಬಾಗಳ್ಛತ್ರಂ ||೬೧|| ವೃ|| ನೆಲದಲ್ಲುಂಗುಟಮೂರಿನಿಳ್ಕಿತನುಮಧ್ಯಂಬಳ್ಕಕೈನೀಡಿಕೋ | ಮಲವಕ್ತ್ರಂಬಿಮರಾನಜೋಲೆಪಣೆಗಂಟಾಶಾಖೆಯುಂಹಸ್ತದಿಂ || ಸೆಳದಂಗೋದ್ಭವಬಾಣಮಂಬಸುಗೆಯಾತೆಚ್ಛಂದಳಿದೊರ್ಗಂಗಲಂ । ಮಿಳಿರಲ್ಮೇಲುದುಮುಗ್ಧೆಕಿಳ್ತುತಳೆದಳ್ತನ್ನುತ್ರಮಾಂಗಾಗ್ರದೊಳ್ || ೬೨ || ಪೆರತಂದೆಡೆಯೊಳ್ಕಚಕುಚ ಜಘನಭರಾವನಮ್ರ ಮಂಥರಗಮನೆ, ಕಂ|| ಮುದದಿಂದಸುಗೆಯುಮುಡಿಯ | ಲ್ಕಿದಿರೇಕ್ಷಣೆಮನವನಾಂತೊಡಂತರುವೇರ || ಲ್ಕದುಬಾರದೆಬುಡದೊಳ್ಮಗೆ | ಪದೆದೊಡೆದದರಲ್ಲತಳಿರನಾಂತಳ್ನಲವಿಂ || ೬೩ || ಪೆರತೊಂದುತಾಣದ ಮಲಯಜ ಮಹೀಜದೊಳೊರ್ವ್ವಳ್; ಕಂ || ತಳಿದೊರ್ಗಂಗಲನುಡಿವೆಡೆಯೊಳ್| ನಳನೇಕ್ಷಣೆಬಿಚ್ಚಿತನ್ನಜಡೆಯುದನವಿಲೊಂ || ದಳಿಪಿಂನೋಡುತೆಪಾವೆಂ | ಡೆಳಸಿಕರಂಕದರ್ಕಿಸತಿಯುಬೆದರಿಸಿತಾಗಳ್ || ೬೪ || ಮತ್ತಮೊಂದೆಡೆ ಮತ್ತೋರ್ವಳ್; ಕಂ|| ಲಲಿತೇಕ್ಷಣೆಮಾಂಮರದೊಳ್ | ತಳಿರಂಸುಮಮುಂಕಡಂಗಿಫಲಮಂಕೊಳ್ವಾ || ಕುಳಿದೊಳ್ಕಪಿತಾನಡರಲ್ | ಬಳಿಕಿಳಿದುರೆಬೆದರ್ಪಬಿಡಪೆನಡುಗಿದಳಾಗಳ್ || ೬೫ || ಮತ್ತಮೊರ್ವ್ವಳ್ ಮಾಕಂದದೊಳ್ ಪರ್ಬಿದ ಮಲ್ಲಿಕಾವಲ್ಲರಿಯಲ್ಲಿಗೈತಂದು ; ವೃ || ತುದಿಯೊಳ್ಪತ್ತಿದಮಲ್ಲಿಕಾಲತೆಯುಚಂಚತ್ಪುಷ್ಪಮಂಕೊಯ್ಯಲು | ನ್ಮದೆಯೊರ್ವ್ವಳ್ಮರವತ್ತಿಪುಷ್ಪತತಿಯಂಕೊಯ್ವಾಗಳೌತ್ಸುಕ್ಯದಿಂ | ಪದೆಪಿಂದಿಲ್ಲಿಮರಲ್ಮರಳ್ನಿಜಮೆನಲ್ಸುತ್ತಿರ್ದಪುಂಸ್ಕೋಕಿ

ಲಂ । ಮದವತ್ತಾಮ್ರಮುಖಂಕೆಡಂಗಪಿರಿದುಂಮುತ್ತಿರ್ದುವಾನಾರಿಯುಂ ॥ ೧೬ ॥ ಮತ್ತಮಾಗಳ್ ; ಕಂ॥ ನಗೆಮೊಗಮಲರ್ದಮ್ಬುಜಮೆಂ । ದೊಗುಮಿಗೆಯಿಂ ಸುಯ್ವಗಂಧನಿಶ್ವಾಸಮನಾ ॥ ಮಿಗಲಲರ್ದಪದ್ಮ ಸುರಭಿಯು । ಬಗೆಯಿಂದೊಡನೊಡನೆಮುತ್ತಿಮುಸುರಿದುವಳಿಗಳ್ ॥ ೧೭ ॥ ಪೆರತೊಂದೆಡೆಯೊಳ್ ;

ಕಂ॥ ಪೊಸಮಡದಿಬನದೆಬೆಳೆದಾ । ಅಸುಗೆಯತಳಿರ್ಗೆಯ್ವಪದದೆಕ್ಕೈನೀಡಲದಂ ॥ ಮಿಸುಗುವತಳಿರ್ಗೆತ್ತೊರ್ವಳ್ । ಸಸಿನದೆಕರದೆಳೆದುನಗಿಸಿದಳ್ಕೆಳದಿಯುರಂ ॥ ೧೮ ॥

ಕಂ॥ ಚೆಂದುಟಿಪೊಗರಿಂಮಲ್ಲಿಗೆ । ಕುಂವದೆಚೆಂಬಣ್ಣಮಾನೆಬಂದುಗೆಯಲರೊಳ್ ॥ ಒಂದಿಪಿಪೊಸವೆಣ್ಣೊರ್ವಳ್ । ಸುಂದರನಖದಿಂದೆಕೆರಿದುಮಲ್ಲಿಗೆಗೆತ್ತಳ್ ॥ ೧೯ ॥

ಕಂ॥ ಅಳಿರ್ದಳರ್ದ ದಿಗ್ದಂತಿಕರಂ । ಪುಳಿನದೆಮಿಗೆಬೆಳೆದುನಿಂದುಕಳ್ತಲಿಸಲೊಡಂ ॥ ಬೆಳತಿಗೆಗಣ್ವೆಣ್ಣೊರ್ವಳ್ । ಲಲನಾಮಣಿಪೊದರೊಳದರಮಲರ್ಗಳನಾಯ್ದಳ್ ॥ ॥ ೨೦ ॥ ಕಂ॥ ಮದನನಗುಣದೊಳ್ಪಗೆಪೆ । ಚಂದೊಪೇನಕಟಕಟಬರಿದೆ ಸಂಪಗೆಮುಗುಳಿಂ ॥ ತಿದುಮನ್ನಿಸಿಕೆಸಖಮೆಂ । ದೊದವಿಕೆರಂಕೊಯ್ದುಮುಡಿದಳಾಸಖಿಯೊರ್ವಳ್ ॥ ೨೧ ॥ ಪೆರತೊಂಡೆಡೆ ಮತ್ತೊರ್ವಳ್ ;

ಕಂ॥ ಅಳಿಗಳಬಾಯೆಂಜಲ್ಬನ । ದೊಳಗಿರ್ಪಖಿಳಪ್ರಸೂನಬೃಂದಂನಿಸದಂ ॥ ವಿಲಸಿತಚಂಪಕದಲರೀ । ಮಲಿನತೆಗೆಡೆಗೊಟ್ಟುದಿಲ್ಲವೆಂದದನಾಯ್ದಳ್ ॥ ೨೨ ॥

ಕಂ ॥ ನಳಿತೋಳನೀಡಿಕಾಮಿನಿ । ವಿಳಸಿತತಿಳಕೋದ್ಗಮಂಗಳಂವಕುಳಂಗಳುಮಂ ॥ ಗಳನೊಲವಿಂತಿರಿದಳ್ಕಿಗೆ । ಲಲಿತಾಂಬಕೆಹಂಸಯಾನೆವರಸಖಿಯೊರ್ವಳ್ ॥ ೨೩ ॥

ಕಂ ॥ ಸುಂದರಿಪಾದರಿಯೊಳ್ಕಿಗೆ । ಚೆಂದಳದಿಂಪುಷ್ಪಬೃಂದಮಂತಿರಿವುತಿರಲ್ ॥ ಚೆಂದಳಿರ್ಗಳನೊಂದಿಸಿತದು ॥ ಬಂಧುರಮೆನೆತಳದಚೆಂಬೊಗರ್ಪಾದರಿಯೊಳ್ ॥ ॥ ೨೪ ॥ ಮತ್ತಮಯೂರವೃತ್ತಂ ॥ ಮಂದಸ್ಮೇರಾಬ್ಜಾಸ್ಯೆಮದಾಳಿಪ್ರಸರಾಂಕಾ । ಮಂದಪ್ರಸ್ಫಾರಾಮ್ರಲಸತ್ಪಲ್ಲವಗುಚ್ಛಂ ॥ ಬೊಂದಲ್ಗಸ್ತ್ರಾಂಭೋಜದೊಳಂಭೋಜಿನಿಚಂದ್ರಂ । ಬೊಂದಿಂದಂದಂದೋರ್ದಸೆಗುಂಭೃಂಗಕಳಂಕಂ ॥ ॥ ೨೫ ॥ ಪೆರತೊಂಡೆಡೆ ; ಕಂ॥ ಸುರಯಿಯಮುಗುಳಂತಿರಯಲ್ । ಸರಸೇಕ್ಷಣೆಪತ್ತೆತನ್ನಕುಚಮಂಟಿಗೆಯಾ । ತರುಮಿಗೆನಸೆಯಿಂನಡುಗುವ । ಪರಿಯಂದೊರೆಕೊಂಡುದರರೆನೋಟಕೆರೆದಸೆಯೊಳ್ ॥ ೨೬ ॥ ಮತ್ತಮೊಂದೆಡೆಯೊಳ್ ; ಕಂ॥ ಜಾತಿಯಿದೇತರಜಾತಿವಿ । ಜಾತಿಯೆತಾನಾದುದಕಟ ಸುಮಜಾತಿಯೊಳೀ ॥ ಜಾತಿಯಲರೆಂದುಕಾಮಿನಿ । ಜಾತಿಯನುರೆತೆಗಳ್ದುಬಳಿಕೆಕಳಿಕೆಯನಾಯ್ದಳ್ ॥ ೨೭ ॥ ಪೆರತೊಂದೆಡೆ ಯೊಳೊರ್ವಳ್ ;

ಕಂ॥ ಗಿಳಿತಲೆದೋರಲ್ಕದರಾ । ವಿಳಸಿತಚಂಚುವನೆಕಿಂಶುಕಪ್ರಸುಮಮಿದೆಂ ॥ ದೆಳಸಿತಿರಿಯಲ್ಕೆಕರ್ದುಕೆ । ಳ್ಗಿಳಿಚೆಂದಳಮಂಬೆದದ್ದುಸಿಡಿಮಿಡಿಗೊಂಡಳ್ ॥ ॥ ೨೮ ॥ ಮತ್ತೊರ್ವಳ್ಕೇದಗೆಯಲ್ಲಿಗೆಯ್ದಿ ; ಕಂ॥ ಶಂಬರರಿಪುಗ

ರಿಗಟ್ಟ | ಲ್ಕಂಬುಗಳೆಂಗರಿಗಳಿಂದವಿಸಾಕೇದಗೆಯಾ || ಕುಂಬಿನಿಯೊಳಖಿಳಯುವ
ರಾ | ಡಂಬರವಿಳಿಗುಂದಲೆಸೆದುಗರಿಗಳನಾಯ್ದಳ್ || ೭೯ || ಪೆರತೊಂದೆಡೆ;
ಕಂ|| ೧ರಿತಿರಿಮುಮಲರನೆಳೆಯುಳ್ | ಪರಿಮಳಿಸುವಸುಯ್ಯುಸುಯ್ದುಬಿಡುಬಿಮರ್ಗ
ಳನಾ || ತಿರಿಮಧುಬಿಂದೂತ್ಕರಮಂ | ಸುರಿವಬ್ಜನಿಯಂತೆವೊಲ್ಕರಂಮೆರೆದಿ
ರ್ದಳ್ || ೮೦ || ಮತ್ತನೊಂದೆಡೆ ಮತ್ತೊರ್ವಳ್ ; ವೃ|| ಸುರು
ಚಿರಚೂತಭಂಜದೊಳದೊರ್ವನಿತಂಬಿನಿಕೊಂಬನಲ್ಲಿಬಂ | ಧುರಕರದಿಂದೆಬಲ್ಸೆಳೆದು
ಬೆಂದ್ಗಳಿರಂಮಿಗೆಕೀಳ್ವವೇಳೆಯೊಳ್ || ಪರಮೆಗಳೆಲ್ಲಮುತ್ತಿಬೆದರ್ದಾಕೊನೆಯಂಬಿ
ಡೆಸೋವುವಂತೆಸ | ತ್ವರದಳಿಬೃಂದಮಂಬೆಮರ್ಗಳಂಮೆರೆದಿರ್ದುದುಕೊಂಬುತೂ
ಗುತಂ || ೮೧ || ಕಂ|| ಮೂಂದಳಿರತೋರತೊಂಗಲ | ನಿಂದೀವರನಯ
ನೆಯೊರ್ವಳೊತ್ತಲ್ಕುಚದೊಳ್ || ಸುಂದರಮಾದುದುಮನ್ಮಥ | ನಂದುರಿಯಿಂಕಾ
ಯ್ದುಬಾಣದೊಳ್ಪೊಡೆದಂದಂ || ೮೨ || ಮತ್ತಮೊಂದೆಡೆ ;
ವೃ|| ವಿಲಸಿತಚಂಪಕಪ್ರಸುಮಮಂಮಿಗೆನಿಳ್ಕುತಕೊಯ್ವನೀರೆಯಾ | ವೋಲೆವೊರೆ
ಯಿಂದೆತೆಳ್ಕಡುಕರಂನಡುಗುಂಮುರಿಗುಂದಲೆಂದುಕೋ || ಮಹರಿನೀಲನಿರ್ಮಿತಶ
ಲಾಕೆಯನೊಯ್ಯನೆಸುತ್ತಿದಂತೆವೋಲ್ | ಸಲೆಮದನಂವಳಿತ್ರಯುಮದೇಂಬಗೆಗೊಂ
ಡುದೊಕಂಜನೇತ್ರೆಯಾ || ೮೩ || ಅಂತಾ ಪುಷ್ಪಾಪಚಯ ಸಮಯ
ದೊಳ್ ಲತಾಂಗಿಯರ, ಕಂ|| ಮೊಳೆವಲ್ಬೆಂದುಟಿಯೆಸಳ್ಗ | ಣ್ಣೆಳನಗೆನ
ಳಿತೋಳ್ಕೆದರ್ದ್ದಸೋರ್ಮುಡಿಯೊಳ್ಕಾಂ || ಪೊಳೆದುವುಮಲ್ಲಿಗೆಬಂದುಗೆ | ಜಲಜಂ
ಮಿಗೆವೊಲ್ಲೆಸಿರಿಸಮುದ್ಘುತಮಾಲಂ || ೮೪ || ಆಗಳ್ ;
ವೃ|| ಮುಡಿಬಿಡುತಂದುಸೂಸೆಮುಗುಳಂಮೊಲೆಮೇಲುದನೆತ್ತನೀವಿಬಿ | ಲ್ಸಡಿಲೆಮು
ಖಾಂಬುಜಂಬೆಮರೆಮೆಯ್ಯಲಸುತ್ತಿರೆಬಾಹುಮೂಲಮುಂ || ಜಡಿಯೆಬಳಲ್ದುಬಳ್ಳಿರು
ಗಿಪತ್ತಿಕೆಡಂಗುತೆಸುಯ್ದುಬಾಡಿನು | ಣ್ಪೊಡೆಸೆಡೆಯಲ್ಕಿತಂಬನಿಯರಾಗಡೆಸೇದೆಯ
ನಾಂತರೆಪ್ಪದಿಂ || ೮೫ || ಅಂತು ಬಾಡಿಬೆಂಡಾಗಿ ; ಕಂ|| ಮಲ
ರಂಬಂಗಲರ್ಗಳನಾಂ | ಧರಿಯಿಸವೇಳ್ಕೊಂದುಬನದಚಂದನಗೃಹದೊಳ್ || ಸುರು
ಚಿರಕದಳೀನಿಳಯದೊ | ಳಿರಸುವವೊಲ್ಪೊಕ್ಕುದಲ್ಲಿಪೆಂಡಿರತಂಡಂ || ೮೬ ||
ಅಂತು ಪೊಕ್ಕಲ್ಲಿ ಕುಳ್ಳಿರ್ದು ಪುಷ್ಪಾಭರಣಂಗಳಂ ಸಮೆದು ; ಕಂ|| ಮಣಿ
ಭೂಷಣಮಿದರಂತಿರೆ | ಗಣನೆಗೆಬರ್ಕುಮೆಮೃದುತ್ವದಿಂಸೌರಭದಿಂ || ದಣಿಯುರವ
ಪುಗುರುಕರ್ಕಶ | ರುಣಮಹಿತಂಪುಷ್ಪಮುಂಡನಂಹರ್ಷಕರಂ || ೮೭ ||
ಎಂದು ನುಡಿಯುತ್ತುಂ ; ವೃ|| ಅಳಿಜಾಳಂಕಚಗಂಧಕಾರ್ದೆರಗೆಲೀಲಾಂ
ಭೋಜದಿಂಪೊಯ್ಯೆಕಂ | ಮಲರಿಂನಿರ್ಮಿಸಿತಾಳ್ದಭೂಷಣದೊಳಾಗಳ್ಸೊಸೆವುಷ್ಪಂ
ಸುಕೋ || ಮಲನುಂದಸ್ಮಿತಮಂದುಮುಂದಡರೆಕಾಂತಾಬೃಂದಮೆಯ್ದೆಂದುದಾ |
ನೆಲದಾಣ್ಮಂಗಿದಿರ್ಗಂದುಜಂಗಮಲತಾಸಂಘಂಕರಂಬರ್ಪವೊಲ್ || ೮೮ ||

